1.ಉಪಾಧ್ಯಕ್ಷರ ಚುನಾವಣೆ

1. ವಿಷಯ: ಶ್ರೀ ಕೆ.ಜಿ.ಬೋಪಯ್ಯನವರನ್ನು ಹದಿಮೂರನೇ ವಿಧಾನಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಚುನಾಯಿಸುವ ಬಗ್ಗೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿ ದೆಸೆಯಿಂದಲೂ ಕೂಡ ಹೋರಾಟ ಮಾಡುತ್ತಾ, ತುರ್ತು ಪರಿಸ್ಥಿತಿಯಲ್ಲಿ ಜೈಲಿನಲ್ಲಿದ್ದು, ಮುಂದೆ ಮಡಿಕೇರಿ ಶಾಸಕರಾಗಿ ಪ್ರಸ್ತುತ ವಿರಾಜಪೇಟೆಯ ಶಾಸಕರಾಗಿರುವ ಶ್ರೀ ಕೆ.ಜಿ.ಬೋಪಯ್ಯರವರನ್ನು ಹದಿಮೂರನೇ ವಿಧಾನ ಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಸ್.ಆರ್.ವಿಶ್ವನಾಥ್(ಯಲಹಂಕ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಸೂಚಿಸಿರುವ ಪ್ರಸ್ತಾಪವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಅಧ್ಯಕ್ಷರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಸೂಚಿಸಿರುವ ಮತ್ತು ಶ್ರೀ ಎಸ್.ಆರ್.ವಿಶ್ವನಾಥ್‌ರವರು ಅನುಮೋದಿಸಿರುವ ಪ್ರಸ್ತಾಪ ಈ ರೀತಿ ಇದೆ:

"ಶ್ರೀ ಕೆ.ಜಿ.ಬೋಪಯ್ಯರವರನ್ನು ಹದಿಮೂರನೇ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು"

ಪ್ರಸ್ತಾಪ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು
ಶ್ರೀ ಕೆ.ಜಿ.ಬೋಪಯ್ಯರವರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು: ಈಗ ನಾನು ಮಾನ್ಯ ಕೆ.ಜಿ.ಬೋಪಯ್ಯರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಕೆ.ಜಿ.ಬೋಪಯ್ಯರವರನ್ನು ಅವರ ಆಸನಕ್ಕೆ ಕರೆದುಕೊಂಡು ಬರಬೇಕೆಂದು ನಾನು ವಿನಂತಿಸುತ್ತೇನೆ.

(ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ಬೋಪಯ್ಯರವರನ್ನು ಉಪಾಧ್ಯಕ್ಷ ಪೀಠಕ್ಕೆ ಕರೆದುಕೊಂಡು ಬಂದರು)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉಪಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿರುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿ): ಮಾನ್ಯ ಕೆ.ಜಿ.ಬೋಪಯ್ಯನವರನ್ನು ಈ ಮನೆಯ ಉಪಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿಕೊಟ್ಟಂತ ನಮ್ಮೆಲ್ಲ ಪ್ರತಿ ಪಕ್ಷ, ಆಡಳಿತ ಪಕ್ಷದ ಸದಸ್ಯರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸನ್ಮಾನ್ಯ ಕೆ.ಜಿ.ಬೋಪಯ್ಯನವರು B.Sc., LLB ಪದವಿ ಪಡೆದು ವಕೀಲರಾಗಿ ತಮ್ಮ ಸೇವೆ ಸಲ್ಲಿಸುತ್ತಾ, ಭಾರತೀಯ ಜನತಾ ಪಾರ್ಟಿಯಿಂದ ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ವಿರಾಜಪೇಟೆ ಕ್ಷೇತ್ರದಿಂದ ಇತ್ತೀಚಿಗೆ ಆಯ್ಕೆಯಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಕೃಷಿ ಮತ್ತು ತೋಟಗಾರಿಕೆಯಲ್ಲಿ ಆಸಕ್ತಿ ಹೊಂದಿರುವ ಇವರು ಅನೇಕ ಜನಪರ ಹೋರಾಟಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅತ್ಯಂತ ಸೌಮ್ಯ ಹಾಗೂ ದೃಢ ವ್ಯಕ್ತಿತ್ವ ಹೊಂದಿರುವ ಇವರು ಇವತ್ತು ವಿಧಾನಸಭೆಯ ಉಪಾಧ್ಯಕ್ಷರಾಗಿರುವುದು ಅತ್ಯಂತ ಸಂತೋಷದ ಸಂಗತಿ. ಬಹಳ ಮುಖ್ಯವಾಗಿ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವಿದ್ಯಾರ್ಥಿಯಾಗಿದ್ದ ಬೋಪಯ್ಯನವರು 2 ತಿಂಗಳ ಕಾಲ DAR ನಲ್ಲಿ ಮೈಸೂರಿನ ಜೈಲಿನಲ್ಲಿದ್ದರು. 1981ರಿಂದ ವಕೀಲ ವೃತ್ತಿ ಆರಂಭಿಸಿದ ಇವರು 2004ರಲ್ಲಿ ಶಾಸಕರಾಗಿ ಆಯ್ಕೆಯಾಗಿ ವಿದ್ಯಾರ್ಥಿ ದಿಶೆಯಲ್ಲಿ ABVP ರಾಜ್ಯ ಕಾರ್ಯದರ್ಶಿಯಾಗಿದ್ದರು. ಹೀಗೆ ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅನುಭವವಿರುವ ಮಾನ್ಯ ಬೋಪಯ್ಯನವರು ಇವತ್ತು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬಹಳ ಜನ ಹಿರಿಯರು ಉಪಾಧ್ಯಕ್ಷರಾಗಿ ಇಲ್ಲಿ ಕುಳಿತು ಸೇವೆ ಮಾಡಿರುವ ಜಾಗದಲ್ಲಿ ಕಿರಿಯರಾಗಿದ್ದರೂ ಸಹ ಇಂಥ ಒಳ್ಳೆಯ ಹುದ್ದೆಗೆ ಇವರು ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ. ಅವರು ಆ ಸ್ಥಾನಕ್ಕೆ ಇನ್ನೂ ಹೆಚ್ಚು ಮೆರುಗನ್ನು ಕೊಟ್ಟು ಒಳ್ಳೆಯ ಆದರ್ಶ, ಮೇಲ್ಪಂಕ್ತಿಯನ್ನು ಹಾಕಿಕೊಡಲಿ ಎಂದು ಹಾರೈಸಿ ಅವರಿಗೆ ಶುಭ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಶ್ರೀ ಕೆ.ಜಿ.ಬೋಪಯ್ಯನವರು ಈ ಸದನದಲ್ಲಿ Deputy Speaker ಆಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಅದಕ್ಕಾಗಿ ನಾನು ಹಾರ್ದಿಕವಾಗಿ ಅವರನ್ನು ಅಭಿನಂದಿಸುತ್ತೇನೆ. ಅವರು Coorg ಜಿಲ್ಲೆಯಿಂದ ಮತ್ತು ವಿಶೇಷವಾಗಿ ವಿರಾಜಪೇಟೆ ತಾಲ್ಲೂಕಿನಿಂದ ಆರಿಸಿ ಬಂದಿದ್ದಾರೆ. ಬಹುಶಃ ವಿರಾಜಪೇಟೆಯಿಂದ ಅವರು 30-40 ವರ್ಷಗಳಲ್ಲಿ ಆಯ್ಕೆಯಾದ ಪ್ರಥಮ ಸದಸ್ಯರು ಎಂದು ಹೇಳಬಹುದು. ಇಲ್ಲಿಯವರೆಗೆ ಅದು ಕಾಯ್ದಿಟ್ಟ ಕ್ಷೇತ್ರವಾಗಿತ್ತು, reserve constituency ಆಗಿದ್ದರಿಂದ ಹತ್ತಾರು ವರ್ಷಗಳಿಂದ ಬೇರೆಯವರು ಆರಿಸಿ ಬರುವ ಅವಕಾಶ ಇರಲಿಲ್ಲ. ಪ್ರಥಮ ಬಾರಿಗೆ ಆ ಮತ ಕ್ಷೇತ್ರದಿಂದ ಕೆ.ಜಿ.ಬೋಪಯ್ಯನವರು

ಆರಿಸಿ ಬಂದಿದ್ದಾರೆ. ಇದಲ್ಲದೆ ಅವರು ಈ ಹೀಂದೆ ಕೂಡ Coorg ಜಿಲ್ಲೆಯಿಂದ ಆರಿಸಿ ಬಂದಿದ್ದರು ಮತ್ತು ಈಗಾಗಲೇ ಮಾನ್ಯ ಯಡಿಯಾರಪ್ಪನವರು ಅವರ ಬಗ್ಗೆ ವಿಶೇಷವಾದ ಅನಿಸಿಕೆಗಳು ಹಾಗೂ ಕೆಲವು ವಿಷಯಗಳನ್ನು ಸದನದ ಮುಂದೆ ಪ್ರಸ್ತಾಪಿಸಿದ್ದಾರೆ. ಅವರು B.Sc., LLB ಪದವೀಧರರಾಗಿದ್ದಾರೆ. ಹೆಚ್ಚು ಕಡಿಮೆ B.Sc., LLB ಎಂದರೆ ವಕೀಲ ವೃತ್ತಿಯನ್ನೇ ಪ್ರರಾಂಭ ಮಾಡುವ ಪ್ರವೃತ್ತಿ. ಆ B.Sc., LLB ಪದವಿ ಪಡೆದು, ಜೊತೆ ಜೊತೆಯಲ್ಲಿ ಅವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿ ರಾಜ್ಯ ಮಟ್ಟದ General Secretary ಆಗಿದ್ದರು ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನನಗೆ ಇದೊಂದೇ danger. ಏಕೆಂದರೆ, ನಾವಿಬ್ಬರೂ ಒಂದೇ ಕಡೆ ಅಕ್ಕಪಕ್ಕದಲ್ಲಿ ಕುಳಿತುಕೊಳ್ಳುತ್ತಿದ್ದೇವೆ. ಅದಕ್ಕಾಗಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿದ್ದು, ಬಿಜೆಪಿಗೆ ಬಂದು ಈ ಸ್ಥಾನವನ್ನು ಅಲಂಕರಿಸಿದ್ದಾರೆ. ಅದಕ್ಕೆ ಅವರಿಗೆ ನನ್ನ ಕಳಕಳಿಯ ಮನವಿ ಏನೆಂದರೆ, ದಯವಿಟ್ಟು impartial ಆಗಿ ನಡೆದುಕೊಳ್ಳಬೇಕು. ಇಲ್ಲವೆಂದರೆ ಅವರ ಗಾಳಿ ನನಗೆ ಬಡಿಯುವುದು ಬೇಡ.

ಅಧ್ಯಕ್ಷರು: ನಾವು ABVP ಯಿಂದ ಬಂದವರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೆರೆಮನೆ ಗಾಳಿ ಬಡಿಯುತ್ತದೆಂದು ಹೇಳತ್ತಾರೆ. ಅದಕ್ಕಾಗಿ, ಈ ನೆರೆಮನೆ ಗಾಳಿ ಬೇರೆಯವರಿಗೆ ಬಡಿಯುವುದು ಬೇಡ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅವರು impartial ಆಗಿ ಈ ಸದನದಲ್ಲಿ ನಡೆದುಕೊಳ್ಳುತ್ತಾರೆನ್ನುವ ಅನಿಸಿಕೆ ನನ್ನದಾಗಿದೆ. ವಿಶೇಷವಾಗಿ ಅವರು ಯಾವುದೇ ಪಕ್ಷದಲ್ಲಿರಲಿ, ನಮ್ಮ ಮನವಿ ಏನೆಂದರೆ, Coorg ಜಿಲ್ಲೆ ಯಾವಾಗಲೂ impartial ಆಗಿ ನಡೆದುಕೊಂಡು ಹೋಗುವ ಜಿಲ್ಲೆ ಮತ್ತು Coorg ಬಗ್ಗೆ ವಿಶೇಷವಾದ ಅಭಿಮಾನ ನನಗೂ ಮತ್ತು ನಮ್ಮ ಅನೇಕ ಮಿತ್ರರಿಗೆ ಇದೆ. ಏಕೆಂದರೆ, ಹೆಚ್ಚು ಕಡಿಮೆ ನಾವು 1972ರಿಂದ ಆರಿಸಿ ಬಂದ ಮೇಲೆ Coorg ಜಿಲ್ಲೆಗೆ ಅನೇಕ ಸಲ ಹೋಗಿ ಬರುವುದಿದೆ. ದಿವಂಗತ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸಾಕಷ್ಟು ಸಲ Coorg ಗೆ ನಾನು ಭೇಟಿ ಕೊಟ್ಟಿದ್ದೇನೆ. ಅದಲ್ಲದೇ, inter-state seniority list ಅನ್ನು ಜಾರಿಯಲ್ಲಿ ತರುವುದಕ್ಕೆ ಯಾರಾದರೂ ಕೆಲಸ ಮಾಡಿದ್ದರೆ ಅದು ಅವರು, ನಾನು ಶಿಕ್ಷಣ ಸಚಿವನಾಗಿ 1977ರಲ್ಲಿ ಮಾಡಿಕೊಟ್ಟದ್ದೇನೆ. Coorg ನಲ್ಲಿರುವ ಅನೇಕರು Inspectors, DPI ಆಗಿ ಎಲ್ಲರ ಜೊತೆಯಲ್ಲಿ ನಡೆದುಕೊಳ್ಳುತ್ತಾರೆ. ಏಕೆಂದರೆ, ಅವರಿಗೆ ಯಾವುದೇ caste, creed, bias, prejudice ಇಲ್ಲ. ಅವರದೇ ಆದ

ನಡವಳಿಕೆ, Culture, ಎಲ್ಲರನ್ನೂ ತೆಗೆದುಕೊಂಡು ಹೋಗುವ ಮೆಚ್ಚುಗೆ ಮತ್ತು ವಿಶೇಷವಾಗಿ ಈ ದೇಶದ ರಕ್ಷಣೆಗಾಗಿ ಹೆಚ್ಚಿನ ಜನ ಸೈನ್ಯದಲ್ಲಿ ಭರ್ತಿಯಾಗಿ Army ಯಲ್ಲಿ ಸೇರುವುದು ಇದೆ. Gen. Kariyappa, Gen.Thimmaiah, Nanda ಈ ತರಹ ಸಾಕಷ್ಟು ಜನರು ಈ ದೇಶಕ್ಕೆ ಸಾಕಷ್ಟು ಸೇವೆ ಸಲ್ಲಿಸಿ, ದೇಶದ ರಕ್ಷಣೆ ಮಾಡುವುದರಲ್ಲಿ ಪ್ರಮುಖವಾದ ಪಾತ್ರ ವಹಿಸಿದ ಜಿಲ್ಲೆಯಿಂದ ತಾವು ಬಂದ್ದಿದ್ದೀರಿ. ನಿಮ್ಮ ಭಾಗದವರು ಸೈನ್ಯದಲ್ಲಿ ಭರ್ತಿಯಾಗಿ ದೇಶದ ರಕ್ಷಣೆ ಮಾಡಿ ನಮ್ಮ ಸ್ವಾತಂತ್ರ್ಯವನ್ನು ಕಾಪಾಡುವ ಕೆಲಸ ಹೇಗೆ ಮಾಡುತ್ತಾರೋ ಅದೇ ರೀತಿಯಾಗಿ ನಮ್ಮ ಸದಸ್ಯರ ಹಕ್ಕಿನ ರಕ್ಷಣೆ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ. ಈ ಕಡೆ ಕುಳಿತ ಮೇಲೆ ನಮ್ಮ ಕಡೆಗೆ ಜಾಸ್ತಿ ನೋಡಬೇಕೆ ಹೊರತಾಗಿ ನಾನು ಅಲ್ಲಿಂದ ಬಂದಿದ್ದೇನೆಂದು ಸ್ವಲ್ಪ ಆ ಕಡೆಗೆ ಕಣ್ಣು ಜಾಸ್ತಿ ಹಾಯಿಸಿದರೆ ನಮಗೆ ಕಷ್ಟವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಒಬ್ಬರು ಈ ಕಡೆ ಕುಳಿತುಕೊಳ್ಳುವ ಪದ್ದತಿ ಏಕೆ ಬಂತೆಂದರೆ, ಎಲ್ಲರನ್ನು ಸರಿಸಮಾನ ದೃಷ್ಟಿಯಿಂದ ನಾವು ನೋಡಿಕೊಳ್ಳುತ್ತೇವೆ ಎನ್ನುವ ರೀತಿಯಲ್ಲಿ ಆಗಿರುವುದು. ಅದಕ್ಕೆ ನಮ್ಮ ಆಪೇಕ್ಷೆ ಮತ್ತು ಅನಿಸಿಕೆ ಏನೆಂದರೆ, ತಾವು ಬಹಳ ನಿಸ್ಪಕ್ಷಪಾತವಾಗಿ ಹೋಗುತ್ತೀರಿ ಎನ್ನುವುದು ಇದೆ. ಅದನ್ನು ತಾವು ಕಾರ್ಯ ರೂಪದಲ್ಲಿಯೂ ಕೂಡ ತರುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳಿ ನಿಮಗೆ ಒಳ್ಳೆಯದಾಗಲಿ, ಯಶಸ್ವಿಯಾಗಿ ಈ ಸದನವನ್ನು ನಡೆಸತಕ್ಕಂತ ಸಾಮರ್ಥ್ಯ ನಿಮಗೆ ಸಿಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಾವು ಈ ದಿವಸ ಉಪಾಧ್ಯಕ್ಷರ ಸ್ಥಾನಕ್ಕೆ ಆಯ್ಕೆಯಾಗಿರುವುದು ಸದನದ ನಮ್ಮೆಲ್ಲ ಸದಸ್ಯರಿಗೆ ವಿಶೇಷವಾಗಿ ವೈಯುಕ್ತಿಕವಾಗಿ ಬಹಳ ಸಂತೋಷವಾಗಿದೆ. ತಾವು ವಕೀಲಿ ವೃತ್ತಿಯಿಂದ ಮತ್ತು ವಿದ್ಯಾರ್ಥಿ ಪರಿಷತ್ ನಿಂದ ಈ ಸ್ಥಾನದವರೆವಿಗೂ ಬರಬೇಕಾದರೆ ಹಲವಾರು ಹೋರಾಟಗಳನ್ನು ಮಾಡುವ ಮೂಲಕ ಜನಪರವಾದ ಕಾರ್ಯಕ್ರಮಗಳನ್ನು ಮಾಡುವ ಮೂಲಕ ತಾವು ಈ ಸ್ಥಾನದವರೆವಿಗೂ ಬಂದಿದ್ದೀರಿ. ವಿಶೇಷವಾಗಿ ಕೊಡಗು ಜಿಲ್ಲೆ, ನಮ್ಮ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ ಹಾಗೆ, ಒಂದು ವಿಶಿಷ್ಟವಾದ ಜಿಲ್ಲೆ. ವಿಶಿಷ್ಟವಾದ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವುದು ಮತ್ತು ಅಲ್ಲಿರುವ ಮದುವೆ ಸಮಾರಂಭ ಅಥವಾ ಹಬ್ಬಗಳಿರಬಹುದು, ಇಡೀ ದೇಶಕ್ಕೆ ಮಾದರಿಯಾಗುವಂಥ ವಿಶಿಷ್ಟವಾದ ಕಲೆ, ಪರಂಪರೆಯನ್ನು ಈ ನಾಡಿಗೆ ಕೊಟ್ಟಿದೆ. ಮತ್ತು ಈ ದೆಶಕ್ಕೆ ಗೌರವ ತರುವ ನಿಟ್ಟಿನಲ್ಲಿ ಸೈನ್ಯದಲ್ಲಿ ಭರ್ತಿಯಾಗುವ ಜನರೂ ಕೂಡ ಕೊಡಗು ಜಿಲ್ಲೆಯಿಂದ ಬಹಳಷ್ಟು ಜನ ಈ ದೇಶಕ್ಕೆ ಸೇವೆ ಮಾಡುವ ಜನ ಆ ಜಿಲ್ಲೆಯಿಂದ ಬಂದಿದ್ದಾರೆ. ಅಂಥ

ಸಂಸ್ಕೃತಿಯಿಂದ ಮತ್ತು ಅಂಥ ಜಿಲ್ಲೆಯಿಂದ ತಾವು ಬಂದಿದ್ದೀರಿ. ತಾವು ಈ ಸ್ಥಾನಕ್ಕೆ ಬಂದಿರುವುದು ನಮಗೆಲ್ಲರಿಗೂ ಸಂತೋಷ ತಂದಿದೆ. ತಾವು ಈ ಸ್ಥಾನದಲ್ಲಿ ಒಳ್ಳೆಯ ಕೆಲಸ ಮಾಡುತ್ತೀರಿ ಎನ್ನುವ ವಿಶ್ವಾಸದೊಂದಿಗೆ ನನ್ನ ಧನ್ಯವಾದಗಳನ್ನು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಾವು ಈ ಒಂದು ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದು ನಿಮ್ಮಗಳ ಒಡನಾಡಿಗಳಾದಂಥ ನಮಗೆ ಬಹಳ ಸಂತೋಷವಾಗಿದೆ. ತಾವು ಮೊದಲನೇ ಶಾಸಕರಾಗಿ ಆಯ್ಕೆಯಾದಾಗ ಈ ಸದನದಲ್ಲಿ ಕಾನೂನಿನ ವಿಷಯಗಳಲ್ಲಿ ಅಧ್ಯಯನ ಮಾಡಿ ಅದನ್ನು ಸದನಕ್ಕೆ ಮತ್ತು ಈ ಶಾಸಕಾಂಗದ ಪ್ರಮುಖರಿಗೆ ನಮ್ಮೆಲ್ಲ ಶಾಸಕ ಸ್ನೇಹಿತರ ಜೊತೆಗೆ ನೀವು ಆ ವಿಷಯವನ್ನು ಹಂಚಿಕೊಳ್ಳುತ್ತಿದ್ದುದ್ದು ನಿಜವಾಗಿಯೂ ನಿಮಗೆ ಈ ಸದನದ ಚಟುವಟಿಕೆಗಳ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನವುದು ಆ ಸಂದರ್ಭದಲ್ಲಿ ವ್ಯಕ್ತವಾಗುತಿತ್ತು. ನಿಯಾಮಾವಳಿಗಳ ಪ್ರಕಾರ ಈ ಸದನ ಹೇಗೆ ನಡೆಯಬೇಕು ಎಂದು ಆಗ ನೀವು ನಮ್ಮ ಜೊತೆಗೆ ಏನು ಚರ್ಚೆ ಮಾಡುತ್ತೀದ್ದೀರೋ ಈಗ ಅದರಂತೆ ನಡೆಸುವಂಥ ಸ್ಥಾನ ತಮಗೆ ಸಿಕ್ಕಿರುವುದು ನಿಮ್ಮ ಕಳಕಳಿ ಜಾರಿಗೆ ತರುವುದಕ್ಕೆ ಬೇಕಾಗಿರುವ ಅವಕಾಶ ಮತ್ತು ಒಂದು ವೇದಿಕೆ ತಮಗೆ ಲಭ್ಯವಾಗಿದೆ. ಹೀಗಾಗಿ ಈ ಸದನದ ಘನತೆ ಗೌರವವನ್ನು ಎತ್ತಿ ಹಿಡಿಯುವುದಕ್ಕೆ ನಾವು ಎಲ್ಲಾ ಸದಸ್ಯರು ಒಟ್ಟಾಗಿ ಪ್ರಯತ್ನವನ್ನು ಮಾಡಬೇಕು. ಅಧ್ಯಕ್ಷರು ಮತ್ತು ತಾವು ಉಪಾಧ್ಯಕ್ಷರಾಗಿ ಅದಕ್ಕೆ ಬಹಳ ಯೋಗ್ಯವಾದ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತೀರಿ ಎನ್ನುವ ವಿಶ್ವಾಸ ನಮಗಿದೆ. ನಮ್ಮೆಲ್ಲ ಸದಸ್ಯರ ಭಾವನೆ ಏನೆಂದರೆ, ಈ ಸದನದಲ್ಲಿ ನಡೆಯುವಂಥ ಎಲ್ಲಾ ಚಟುವಟಿಕೆಗಳು ಜನ ಮೆಚ್ಚುವ ರೀತಿಯಲ್ಲಿ ಇರಬೇಕೆಂದು ಇದೆ. ಅನೇಕ ಸಂದರ್ಭದಲ್ಲಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ, ಅಲ್ಲಿ ಒಂದು ವಿಷಯದ ಬಗ್ಗೆ ಅಭಿಪ್ರಾಯ ಭೇದ ಬಂದಾಗ ಅವರು ಅದನ್ನು ಸೌಹಾರ್ದಯುತವಾಗಿ ಆ ಒಂದು ವಿಷಯಕ್ಕೆ ತಕ್ಕಂತೆ ನಿರ್ಣಯ ಮಾಡಬೇಕಾಗುತ್ತದೆ, ಚರ್ಚೆ ಮಾಡಬೇಕಾಗುತ್ತದೆ ಎಂದು ನಾವೆಲ್ಲ ಬಯಸುತ್ತೇವೆ. ಆದರೆ, ಇಲ್ಲಿ ಅನೇಕ ಸಂದರ್ಭದಲ್ಲಿ ಆ ರೀತಿ ಚರ್ಚೆ ನಡೆಯುವುದಿಲ್ಲ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಇಂಥ ಪವಿತ್ರವಾದ ಸದನ ರಾಜಕೀಯ ಕೆಸರಾಟದ ವೇದಿಕೆಗಳು ಆಗದೇ ಇರುವ ಹಾಗೆ ಮತ್ತು ಎಲ್ಲಾ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿರಬಹುದು, ಇಡೀ ಸಮಾಜದಲ್ಲಿ ನಡೆಯತಕ್ಕಂಥ ಎಲ್ಲಾ ಚಟುವಟಿಕೆಗಳಿಗೂ ನಮ್ಮ ಸದನ ಮಾದರಿಯಾಗಿ ನಡೆಸುವುದಕ್ಕೆ, ಅಧ್ಯಕ್ಷರು ಮತ್ತು ತಾವು ಉಪಾಧ್ಯಕ್ಷರಾಗಿ ನಿಶ್ಚಿತವಾಗಿ ಒಂದು ಒಳ್ಳೆಯ

ಪ್ರಯತ್ನ ಮಾಡುತ್ತೀರಿ ಎಂದು ನಿಮ್ಮೆಲ್ಲರ ಒಡನಾಡಿಗಳಾದ ನಮಗೆ ವಿಶ್ವಾಸವಿದೆ. ತಾವು ಸಾಕಷ್ಟು ಹಿನ್ನಲೆಯನ್ನು ಹೊಂದಿ ವಕೀಲ ವೃತ್ತೀಯಲ್ಲಿ ಯಶಸ್ವಿಯಾಗಿ ಇವತ್ತು ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗಿ ಈ ಒಂದು ಅನುಭವ ಪಡೆದಂಥವರು ಈ ಸದನವನ್ನು ರಾಜ್ಯದಲ್ಲಿ ಅತ್ಯುತ್ತಮವಾಗಿ ನಡೆಸುವುದರ ಜೊತೆಯಲ್ಲಿ ದೇಶದಲ್ಲಿ ಕರ್ನಾಟಕ ವಿಧಾನ ಸಭೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಂದಾಗಿ ಅತ್ಯುತ್ತಮವಾದ ಚಟುವಟಿಕೆಗಳನ್ನು ಮಾಡಿಕೊಂಡು ಹೋಗುತ್ತಿದೆ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗುವ ರೀತಿಯಲ್ಲಿ ತಾವು ನಡೆಸುತ್ತೀರಿ ಎನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿ, ನಮ್ಮೆಲ್ಲರ ಪರವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ(ಉನ್ನತ ಶಿಕ್ಷಣ ಸಚಿವರು): ತಮಗೆ ಅಭಿನಂದನೆಗಳು. ತಾವು ಈ ಸಭೆಗೆ ಬರುವುದಕ್ಕಿಂತ ಮುಂಚೆಯಿಂದಲೂ ಸಾಕಷ್ಟು ಪರಿಚಿತರು. ತಮ್ಮ ಕೊಡಗು ಜಿಲ್ಲೆಯಲ್ಲಿ ನಮ್ಮ ಪಕ್ಷವನ್ನು ವ್ಯವಸ್ಥಿತವಾಗಿ ನಡೆಸಿರುವ ಕೀರ್ತಿ ತಮಗೆ ಸಲ್ಲುತ್ತದೆ. ಅಲ್ಲಿ ಜಿಲ್ಲಾ ಅಧ್ಯಕರಾಗಿ, ಅಲ್ಲಿಯ ಸಾರ್ವಜನಿಕ ಜೀವನದಲ್ಲಿ ಸಾಕಷ್ಟು ತಮ್ಮನ್ನು ತಾವು ತೊಡಗಿಸಿಕೊಂಡಿದ್ದೀರಿ. ವಿಶೇಷವಾಗಿ ಆ ಜಿಲ್ಲೆಯಲ್ಲಿ ಜಮ್ಮಾ ಮತ್ತು ಬಾಣೆ, ಆ ಸಮಸ್ಯೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ತಾವು ಅಗ್ರಪಡಿಸಿರುವುದು ಮತ್ತು ಹಿಂದಿನ ಸರ್ಕಾರದಲ್ಲಿ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿಯೂ ಕೂಡ ಆ ವಿಷಯವನ್ನು ಅವರ ಹತ್ತಿರ ತೆಗೆದುಕೊಂಡು ಹೋಗಿ ಅವರು ಕೂಡ ಸಾಕಷ್ಟು ಪ್ರಯತ್ನ ಮಾಡಿ ಆ ಸಮಸ್ಯೆಯನ್ನು ಪರಿಹಾರಗೊಳಿಸುವುದರಲ್ಲಿ ತಾವು ಯಶಸ್ವಿಯಾಗಿದ್ದೀರಿ. ಹೀಗಾಗಿ ಸಾರ್ವಜನಿಕರ ಜೀವನದಲ್ಲಿ ಹೇಗೆ ಇರಬೇಕೆನ್ನುವುದಕ್ಕೆ ಒಂದು ಉದಾಹರಣೆ ತಾವು ಆಗಿದ್ದೀರಿ ಎನ್ನುವುದು ನನ್ನ ಭಾವನೆ. ಒಟ್ಟಾರೆಯಾಗಿ ಸಾರ್ವಜನಿಕ ಜೀವನದ ಚಟುವಟಿಕೆಗಳನ್ನು ಮಾಡುತ್ತಿರುವ ವ್ಯಕ್ತಗಳಿಗೆ ಕೊಡಗು ಜಿಲ್ಲೆಯಲ್ಲಿ ಒಬ್ಬ ಪ್ರೇರಣೆ ಕೊಡುವ ವ್ಯಕ್ತಿಯಾಗಿದ್ದೀರಿ. ತಾವು ನಿಜವಾಗಿ ಉಪಾಧ್ಯಕ್ಷರಾಗಿ ಕುಳಿತು ಈ ಸದನ ನಡೆಸುವುದು ಹೇಗೆ ಎಂದರೆ, ಸಾರ್ವಜನಿಕ ಸಮಸ್ಯೆಗಳೇ ಹೆಚ್ಚು ಚರ್ಚೆಯಾಗುವ ಈ ಸದನದಲ್ಲಿ ಆ ರೀತಿಯ ವ್ಯಕ್ತಿ ಅಲ್ಲಿ ಕುಳಿತು ಸದನ ನಡೆಸುವುದಕ್ಕೆ ಸಹಾಯವಾಗುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಎಲ್ಲಾ ಸದಸ್ಯರ ಪರವಾಗಿ ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ನೆಹರೂ ಓಲೇಕಾರ್ ಚೆನ್ನಬಸಪ್ಪ (ಹಾವೇರಿ): ತಾವು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದು ನನಗೆ ಹಾಗೂ ನಮ್ಮೆಲ್ಲರಿಗೂ ಬಹಳ ಸಂತೋಷವನ್ನುಂಟು

ಮಾಡಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವಿಶೇಷವಾಗಿ ನನಗೆ ಬಹಳ ಸಂತೋಷವಾಗಿದೆ. ಏಕೆಂದರೆ, ನಮ್ಮ ಪಕ್ಕದಲ್ಲಿಯೇ ಇರುವ ನಮ್ಮ ಸ್ನೇಹಿತರೊಬ್ಬರು ವಿಧಾನ ಸಭೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾಗುತ್ತಾರೆಂದರೆ ಬಹಳ ಅತ್ಯಂತ ಖುಷಿ ತರುವ ವಿಷಯ ಎಂದು ನಾನು ಹೇಳಬಯಸುತ್ತೇನೆ. ಅದರ ಜೊತೆಗೆ ತಾವು ತಮ್ಮ ಈ ಹಿಂದಿನ ದಿನಗಳಲ್ಲಿ ಹೋರಾಟ ಮಾಡಿ ಪ್ರಾಮಾಣಿಕವಾದ ಕೆಲಸ, ಸೇವೆಯನ್ನು ತಮ್ಮ ಕ್ಷೇತ್ರಕ್ಕೆ ಮತ್ತು ತಮ್ಮ ಜಿಲ್ಲೆಗೆ ಕೊಟ್ಟಿದ್ದೀರಿ. ಅದರ ಪ್ರಯುಕ್ತ ಇವತ್ತು ಇಂಥ ಉನ್ನತವಾದ ಹುದ್ದೆ ಯಾವುದೇ ಪ್ರಯತ್ನ ಮಾಡದಿದ್ದರೂ ತಮಗೆ ಲಭಿಸಿದೆ ಎಂದರೆ ತಮ್ಮ ಪ್ರಾಮಾಣಿಕ ಕೆಲಸವೆಂದು ನಾನು ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ಇನ್ನು ಹೆಚ್ಚು ಪಾಮಾಣಿಕ ಕೆಲಸ ಈ ರಾಜ್ಯಕ್ಕೆ ಆಗಬೇಕಾಗಿದೆ, ಈ ಸದನವನ್ನು ಸರಿಯಾದ ರೀತಿಯಲ್ಲಿ ಕಾನೂನು ಬದ್ದವಾಗಿ ನಡೆಸಿಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿ ತಮ್ಮ ಮೇಲಿದೆ. ತಾವು ಸದನವನ್ನು ಸರಿಯಾದ ನಿಟ್ಟಿನಲ್ಲಿ ನಡೆಸುತ್ತೀರಿ ಎನ್ನುವ ಭಾವನೆ ನನ್ನದಾಗಿದೆ. ಕಾರಣ ಏನೆಂದರೆ, ತಾವು ವಕೀಲ ವೃತ್ತಿಯಲ್ಲಿ ಕಾನೂನು ಪಂಡಿತರು. ಕಾನೂನನ್ನು ಚಾಚೂ ತಪ್ಪದೇ ಅಳವಡಿಸಿಕೊಂಡು ಬಂದಂಥವರು. ಆ ನಿಟ್ಟಿನಲ್ಲಿ ತಾವು ಇವತ್ತು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ, ಇದಕ್ಕಾಗಿ ನಾನು ತಮಗೆ ತುಂಬು ಹೃದಯದಿಂದ ಅಭಿನಂದಿಸುತ್ತಾ, ನನಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಮಡಿಕೇರಿ): ತಾವು ಈ ಸದನದ ಉಪಾಧ್ಯಕ್ಷರಾಗಿ ಆ ಸ್ಥಾನವನ್ನು ಅಲಂಕರಿಸಿದ್ದೀರಿ ಮೊದಲನೆಯಾದಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಾನು ಅವರು ಬಹಳ ಸ್ನೇಹಿತರು. ನಾವು ಹಲವಾರು ವರ್ಷಗಳಿಂದ ಜೊತೆಯಲ್ಲಿದ್ದು ಪಕ್ಷದ ಕೆಲಸ ಮಾಡಿಕೊಂಡು ಬಂದಂಥವರು. ನಾನು ಜಿಲ್ಲಾಧ್ಯಕ್ಷನಾಗಿದ್ದಾಗ ಅವರು ಕಾರ್ಯದರ್ಶಿಯಾಗಿ ಇಡೀ ಕೊಡಗಿನಲ್ಲಿ ನಾವಿಬ್ಬರೂ ಜೊತೆ ಸೇರಿ ಕೆಲಸ ಮಾಡಿದೆವು. ಅದರ ಜೊತೆಗೆ ನಮ್ಮ ನಿಮ್ಮ ಸಂಬಂಧ ಸುಮಾರು 28–30 ವರ್ಷಗಳ ಸಂಬಂಧ. ಯಾವುದೇ ಸಂದರ್ಭದಲ್ಲಿ ಅನ್ಯಾಯವಾದಾಗ ಅದರ ವಿರುದ್ಧ ಪ್ರತಿಭಟಿಸಿ ನ್ಯಾಯಕ್ಕಾಗಿ ತಾವು ಹೋರಾಟ ಮಾಡಿದ್ದೀರಿ. ಇವತ್ತು ತಾವು ಈ ಉನ್ನತ ಹುದ್ದೆಯನ್ನು ಅಲಂಕರಿಸಿದ್ದೀರಿ. ತಾವು ವಕೀಲರಾಗಿ ಒಳ್ಳೆಯ ಕೆಲಸ ಕೂಡ ಮಾಡಿದ್ದೀರಿ. ಸದನದ ಘನತೆ – ಗೌರವ ತಾವು ಕಾಪಾಡುತ್ತೀರಿ, ಅದರಲ್ಲೂ ತಾವು ಕಾನೂನಿನ ತಜ್ಞರಾಗಿ ಸದನದ ನಿಯಾಮಾವಳಿಯನ್ನು ಪಾಲಿಸಿ ಈ ಸದನದ ಗೌರವವನ್ನು ಮತ್ತಷ್ಟು ಹೆಚ್ಚಿಸುವುದಕ್ಕೆ ಅರ್ಹರಾಗಿದ್ದೀರಿ ಎನ್ನುವ ವಿಚಾರವನ್ನು ಹೇಳುತ್ತೇನೆ. ಕೊಡಗು

ಜಿಲ್ಲೆಯವರಾದ ತಾವು ಮೊದಲನೇ ಬಾರಿಗೆ ವಿಧಾನ ಸಭೆಯ ಉಪಾಧ್ಯಕ್ಷರಾಗಿರುವುದರಿಂದ ನನಗೆ ಸಂತೋಷವಾಗಿದೆ. ಇದು ಕೊಡಗಿನ ಜನತೆಗೆ ಹೆಮ್ಮೆಯ ಹಾಗೂ ಒಂದು ಒಳ್ಳೆಯ ಸಂದೇಶ ಕೊಡತಕ್ಕಂಥ ವಿಚಾರವಾಗಿದೆ ಎಂದು ಹೇಳಿ ತಮಗೆ ಶುಭವಾಗಲಿ, ಸದನದ ಗೌರವವನ್ನು ಎತ್ತಿ ಹಿಡಿಯುವ ಕೆಲಸವನ್ನು ತಾವು ಮಾಡುತ್ತೀರಿ, ಇನ್ನೊಮ್ಮೆ ತಮಗೆ ಅಭಿನಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ಧ್ರುವನಾರಾಯಣ್(ಕೊಳ್ಳೆಗಾಲ):– ಮಾನ್ಯ ಉಪಾಧ್ಯಕ್ಷರೆ, ತಾವು ಈ ಸದನದ ಉಪಾಧ್ಯಕ್ಷರಾಗಿ ಮೊದಲನೇ ಬಾರಿಗೆ ಆಯ್ಕೆಯಾಗಿರುವುದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನಗಂತೂ ನಿಜವಾಗಿಯೂ ಕೂಡ ಬಹಳ ಸಂತೋಷವಾಗಿದೆ. ಏಕೆಂದರೆ, ನಮ್ಮ ಪಕ್ಕದ ಜಿಲ್ಲೆಯಾದ ಕೊಡಗು ಜಿಲ್ಲೆಗೆ ಯಾವುದೇ ರೀತಿಯ ಪ್ರಾತಿನಿಧ್ಯತೆ ಇರಲಿಲ್ಲ. ಮೈಸೂರು ಜಿಲ್ಲೆಗೂ ಕೂಡ ಸರಿಯಾದ ರೀತಿಯಲ್ಲಿ ಪ್ರಾತಿನಿಧ್ಯತೆ ಇಲ್ಲ. ಮತ್ತೇ ಚಾಮರಾಜನಗರ ಜಿಲ್ಲೆಗಂತೂ ಇಲ್ಲವೇ ಇಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಪಕ್ಕದ ಜಿಲ್ಲೆಯವರಿಗೆ ಉಪಾಧ್ಯಕ್ಷ ಸ್ಥಾನದ ಅವಕಾಶ ಸಿಕ್ಕಿದೆ. ತಮ್ಮ ಅವಧಿಯಲ್ಲಿ ಈ ಸದನ ಚೆನ್ನಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತು ವಿಶೇಷವಾಗಿ ವಿರೋಧಪಕ್ಷದಲ್ಲಿರತಕ್ಕಂಥವರು ಮಾತನಾಡುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. 2004ನೇ ಸಾಲಿನಲ್ಲಿ ನಾವು ಜೊತೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದೇವೆ. ಹಾಗೆಯೇ ನಮ್ಮ ಸಬ್ ಕಮಿಟಿಯಲ್ಲಿಯೂ ಕೂಡ ನಾವಿಬ್ಬರೂ ಜೊತೆಯಲ್ಲಿಯೇ ಕೆಲಸ ಮಾಡಿದ್ದೇವೆ. ತಾವು ಕಾನೂನು ಮತ್ತು ನ್ಯಾಯ ಪರ ಇರತಕ್ಕಂಥ ವ್ಯಕ್ತಿಯಾಗಿದ್ದೀರಿ. ಆದ್ದರಿಂದ, ನಮಗೆ ನಿಜವಾಗಿಯೂ ಸಂತೋಷವಾಗುತ್ತದೆ. ತಮ್ಮ ಅವಧಿಯಲ್ಲಿ ಇಲ್ಲಿ ಒಂದು ಒಳ್ಳೆಯ ಸಂಪ್ರದಾಯ ಬೆಳೆಯಲೆಂದು ತಮಗೆ ಶುಭ ಹಾರೈಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು ದಕ್ಷಿಣ):– ಸನ್ಮಾನ್ಯ ಉಪಾಧ್ಯಕ್ಷರಿಗೆ ನಾನು ಮಾಡುವಂಥ ಅಭಿನಂದನೆಗಳು. ತಾವು ಸದನದ ಒಳಗೆ ಮತ್ತು ಹೊರಗೂ ಒಬ್ಬ ಕಾನೂನು ತಜ್ಞರಾಗಿ, ಶಾಸಕರಾಗಿ ಹಾಗೂ ಜನಪ್ರತಿನಿಧಿಯಾಗಿ ಜನರ ನೋವು–ನಲಿವುಗಳು ಮತ್ತು ಸದನದ ಶಾಸಕರ ಬವಣೆಗಳೂ ಕೂಡ ತಮಗೆ ಗೊತ್ತಿದೆ. ಹಿಂದಿನ ಬೆಂಚ್ನಲ್ಲಿ ಕುಳಿತುಕೊಂಡಿರುವ ಶಾಸಕರುಗಳಿಗೆ ವಿಶೇಷವಾಗಿರತಕ್ಕಂಥ ಆದ್ಯತೆಯನ್ನು ತಾವು ಕೊಡಬೇಕೆಂಬುದು ಅನೇಕ ಸಂದರ್ಭದಲ್ಲಿ ತಾವು ತಮ್ಮ ಅನುಭವದ ಮಾತುಗಳನ್ನು ಹೇಳುತ್ತಿದ್ದೀರಿ.

ಬಹುಶಃ ಇದಕ್ಕಾಗಿ ತಮಗೆ ಸದಾವಕಾಶ ಸಿಕ್ಕಿದೆ. ತಮ್ಮ ವ್ಯಾಪ್ತಿಯಲ್ಲಿ ಬರತಕ್ಕಂತ ಅರ್ಜಿ ಸಮಿತಿಗೆ ವಿಶೇಷವಾದಂಥ ಕಾಯಕಲ್ಪವನ್ನು ತಾವು ಕೊಡಬಹುದು. ಕೇವಲ ಹೆಸರಿಗೆ ಮಾತ್ರ ಇರತಕ್ಕಂಥ ಈ ಅರ್ಜಿ ಸಮಿತಿ ರಾಜ್ಯಾದ್ಯಂತ ಅನೇಕ ಪತ್ರ ವ್ಯವಹಾರಗಳ ನಂತರವೂ ಕೂಡ ಯಾವುದೇ ಒಂದು ಇತ್ಯರ್ಥವಾಗದೆ ಇರತಕ್ಕಂಥ ವ್ಯವಸ್ಥೆಗೆ ಕಾಯಕಲ್ಪ ಕೊಟ್ಟು ಅದನ್ನು ಪರಿಹಾರ ಮಾಡತಕ್ಕಂಥ ದಿಕ್ಕಿನಲ್ಲಿ ವಿಶೇಷವಾದಂಥ ಮುತ್ವರ್ಜಿಯನ್ನು ತಾವು ವಹಿಸುವುದಕ್ಕೆ ಸಾಧ್ಯವಿದೆ. ರಾಜ್ಯಾದಂತ ಈ ತರಹದ ಇರತಕ್ಕಂಥ ಅರ್ಜಿಯನ್ನು ಸ್ವೀಕಾರ ಮಾಡುವುದಕ್ಕೆ ತಾವು ಚಾಲನೆ ಕೊಟ್ಟರೆ ಬಹಳಸ್ಟು ಸಮಸ್ಯೆಗಳನ್ನು ಇತ್ಯರ್ಥ ಮಾಡಿದಂತ ಕೀರ್ತಿ ತಮಗೆ ಬರುತ್ತದೆ. ಈ ನಿಟ್ಟಿನಲ್ಲಿ ತಾವು ಯೋಚನೆ ಮಾಡಬಹುದು. ಅದೇ ರೀತಿಯಲ್ಲಿ ರೂಲ್ ಕೋಡಿಫಿಕೇ್ನ್ ಬಗ್ಗೆ ಈಗ ಹೆಜ್ಜೆಗಳನ್ನು ಇಡಲಾಗಿದೆಯಷ್ಟೆ. ಇದರ ಬಗ್ಗೆ ಯಾವ ರೀತಿಯಾಗಿ ಕಾರ್ಯವನ್ನು ಮಾಡಬಹುದೆಂಬುದರ ಬಗ್ಗೆ ಸಮಗ್ರವಾಗಿ ಕೋಡಿಫಿಕೇಷನ್ ಮಾಡುವುದರ ಮೂಲಕ ಜನಸಾಮಾನ್ಯರಿಗೆ ಇವತ್ತು ಕಾನೂನಿನ ಸರಳೀಕರಣ ಆಗುವಂಥ ನಿಟ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟಂಥ ಒಂದು ಹೆಜ್ಜೆಯನ್ನು ಇಡಬೇಕು. ಇವತ್ತು ಕಾನೂನು ಇಲಾಖೆ ಮಾತ್ರವಲ್ಲದೆ ಶಾಸಕಾಂಗದ ಕಡೆಯಿಂದಲೂ ಕೂಡ ಇದರ ಬಗ್ಗೆ ಹೆಚ್ಚಿನ ಚಾಲನೆ ಕೊಟ್ಟು ಕಾರ್ಯರೂಪಕ್ಕೆ ತರತಕ್ಕಂಥದ್ದು ಅವಶ್ಯಕತೆ ಇದೆ. ಶಾಸಕರ ಭವನದ ಮೇಲ್ವಿಚಾರಣೆ ತಮಗೆ ಬರುತ್ತದೆ. ಅಲ್ಲಿಯೂ ಕೂಡ ಇರತಕ್ಕಂಥ ವ್ಯವಸ್ಥೆಯನ್ನು ಸುಧಾರಣೆ ಮಾಡಬಹುದಾಗಿದೆ. ಅದೇ ರೀತಿಯಾಗಿ ಸದನದ ಒಳಗೂ ಕೂಡ ಆಧುನೀಕರಣ ಮತ್ತು ಕಂಪ್ಯೂಟರೀಕರಣಗೊಳಿಸತಕ್ಕಂಥದ್ದು ಮತ್ತು ಬೇರೆ ಬೇರೆ ತರಹ ಅಂದರೆ, ಅಧ್ಯಯನಕ್ಕೆ ಸಂಬಂಧಪಟ್ಟಂತೆ ಲೈಬ್ರರಿ ಮತ್ತು ರಿಸರ್ಚ್‌ಗೆ ಸಂಬಂಧಪಟ್ಟಂತೆ ಬೇಕಾಗಿರತಕ್ಕಂಥ ಹೆಚ್ಚಿನ ಒಂದು ಸೌಲಭ್ಯವನ್ನು ಒದಗಿಸುವುದಕ್ಕೆ ತಾವು ಹೆಚ್ಚಿನ ಕಾರ್ಯವನ್ನು ಮಾಡಬಹುದು. ಮತ್ತೇ ವಿಶೇಷವಾಗಿ ತಮಗೆ ಎಲ್ಲಾ ತರಹದ ಸಂಯಮ, ತಾಳ್ಮೆ ಇರುವುದರಿಂದ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಕಾರ್ಯವನ್ನು ಒಳ್ಳೆಯ ರೀತಿಯಿಂದ ತಾವು ನಿರ್ವಹಿಸುತ್ತೀರಿ ಎಂಬ ವಿಶ್ವಾಸ ಈ ಸಂದರ್ಭದಲ್ಲಿ ವ್ಯಕ್ತಪಡಿಸಿ ತಮಗೆ ಎಲ್ಲಾ ತರಹದ ಯಶಸ್ಸನ್ನು ಒಬ್ಬ ಮಿತ್ರನಾಗಿ ಕೋರುತ್ತಿದ್ದೇನೆ.

ಶ್ರೀ ಎನ್.ವೈ.ಗೋಪಾಲ ಕೃಷ್ಣ(ಮೊಳಕಾಲ್ಮೂರು):– ಮಾನ್ಯ ಉಪಾಧ್ಯಕ್ಷರೆ, ನೂತನವಾಗಿ ಇವತ್ತಿನ ದಿವಸ ಉನ್ನತ ಒಂದು ಸ್ಥಾನಕ್ಕೆ ತಮ್ಮನ್ನು ಆಯ್ಕೆಮಾಡಿ ಉಪಾಧ್ಯಕ್ಷರನ್ನಾಗಿ ಮಾಡಿರತಕ್ಕಂಥ ಸಂದರ್ಭದಲ್ಲಿ ಮೊಟ್ಟಮೊದಲನೆಯದಾಗಿ ತಮ್ಮನ್ನು ಆ ಸ್ಥಾನಕ್ಕೆ ಕುಳ್ಳಿರಿಸಿರತಕ್ಕಂಥ ವ್ಯಕ್ತಿಗಳಿಗೆ ನಾನು ಅಭಿನಂದಿಸಬೇಕು.

ಕಾರಣವೇನೆಂದರೆ, ತಾವು ಬಹಳ ಹಿಂದುಳಿದಂತ ಪ್ರದೇಶವಾದ ಕೊಡಗು ಜಿಲ್ಲೆಯಿಂದ ಬಂದಿರತಕ್ಕಂತ ವ್ಯಕ್ತಿಗಳಾಗಿದ್ದೀರಿ. ನಾನು ಮತ್ತು ನನ್ನ ಸ್ನೇಹಿತರಾಗಿರುವ ಮಾನ್ಯ ದಿನೇಶ್ ಗುಂಡೂರಾವ್‌ರವರು ನಿನ್ನೆದಿವಸ ಮಾತನಾಡುವಂತ ಸಂದರ್ಭದಲ್ಲಿ ತಮ್ಮ ಬಗ್ಗೆ ನೆನಪಿಸಿಕೊಳ್ಳುತ್ತಾ ಅನುಭವಿ ರಾಜಕಾರಣಿ, ಜೊತೆಗೆ ಒಳ್ಳೆಯ ವಾಗ್ಮಿ, ಒಬ್ಬ ಒಳ್ಳೆಯ ವಕೀಲರೂ ಕೂಡ, ಎಂದು ಎಲ್ಲರಿಗೂ ಸಹ ಗೊತ್ತಿರತಕ್ಕಂತ ವಿಚಾರ. ಈ ಒಂದು ಹಿನ್ನಲೆಯಲ್ಲಿ ತಮ್ಮನ್ನು ಈ ಸರ್ಕಾರದಲ್ಲಿ ಮಂತ್ರಿಯಾಗಿ ತೆಗೆದುಕೊಳ್ಳುತಾರೆಂಬುದು ನಾವು ಬಹಳಷ್ಟು ನಿರೀಕ್ಷೆ ಮಾಡಿದ್ದೆವು. ಆದರೆ, ಅದಕ್ಕಿಂತ ಹೆಚ್ಚಿನ ಒಂದು ಸ್ಥಾನವಾದ ಉಪಾಧ್ಯಕ್ಷ ಸ್ಥಾನಕ್ಕೆ ತಮ್ಮನ್ನು ಆಯ್ಕೆ ಮಾಡಿರತಕ್ಕಂತ ಈ ಸಂದರ್ಭದಲ್ಲಿ ನಾನು ತಮ್ಮನ್ನು ವೈಯುಕ್ತಿಕವಾಗಿ ಅಭಿನಂದಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಮಾತನಾಡುವುದಕ್ಕೆ ಕಾರಣವೇನೆಂದರೆ, ಸಮ್ಮಿಶ್ರ ಸರ್ಕಾರ ಇದ್ದಂತ ಅವಧಿಯಲ್ಲಿ ಸುಮಾರು ಮೂರು ವರ್ಷಗಳ ಕಾಲ ನಾನು ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನಾನು ಆ ಒಂದು ಸ್ಥಾನಕ್ಕೆ ಆಯ್ಕೆಯಾದಂತ ಸಂದರ್ಭದಲ್ಲಿ ಆ ಸ್ಥಾನ ಬಹಳ ಸುಂದರವಾಗಿರತಕ್ಕಂಥದ್ದು ಮತ್ತು ಸಂತೋಷಪಡತಕ್ಕಂಥ ಸ್ಥಾನವೆಂದು ಬಹಳಷ್ಟು ಜನರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಉಪಾಧ್ಯಕ್ಷ ಸ್ಥಾನದಲ್ಲಿರತಕ್ಕಂಥ ವ್ಯಕ್ತಿಯ ನೋವು ಬಹುಶಃ ಆ ಪ್ಯಾನಲ್‌ನಲ್ಲಿರತಕ್ಕಂಥ ಸದಸ್ಯರಿಗೆ ಮಾತ್ರ ಗೊತ್ತಾಗುತ್ತದೆ. ಇವತ್ತಿನ ದಿವಸ ಬಹಳಷ್ಟು ಚೆನ್ನಾಗಿ ತಾವು ನಗುತ್ತಿದ್ದೀರಿ. ಪ್ರಾರಂಭವಾದ ಮೇಲೆ ಇದರ ಸಮಸ್ಯೆ ಏನೆಂದು ಗೊತ್ತಾಗುತ್ತದೆ. ಅದು ಒಂದು ರೀತಿಯಲ್ಲಿ ಮುಳ್ಳಿನ ಹಾಸಿಗೆ ಇದ್ದಂತೆ. ಪ್ರತಿ ಇಂಚಿಂಚು ಕೂಡ ಆ ಸ್ಥಾನ ಹಿಂಸೆ ಕೊಡುತ್ತಿರುತ್ತದೆ. ನಾನು ನನ್ನ ಕ್ಷೇತ್ರಕ್ಕೆ ಹೋದ ಸಂದರ್ಭದಲ್ಲಿ ಅಮಾಯಕರಾದ ನನ್ನ ಮತದಾರರು ಯಾವುದೋ ಒಂದು ವರ್ಗಾವಣೆ ಅಥವಾ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಕೆಲವು ಸಮಸ್ಯೆಗಳ ಬಗ್ಗೆ ಅವರು ಕೇಳತಕ್ಕಂಥ ಸಂದರ್ಭದಲ್ಲಿ ಅಣ್ಣ ನೀವು ಅಷ್ಟು ದೊಡ್ಡ ಸ್ಥಾನದಲ್ಲಿ ಮೇಲೆ ಕುಳಿತುಕೊಂಡಿದ್ದು, ಕೆಳಗಡೆ ಆ ಕಡೆ ಮುಖ್ಯಮಂತ್ರಿಗಳು ಈ ಕಡೆ ಉಪಾಧ್ಯಕ್ಷರು ಕುಳಿತುಕೊಂಡಿರುತ್ತಾರೆ ಮತ್ತೇ ಬಲಕ್ಕೆ ಮಂತ್ರಿಗಳು, ಎಡಕ್ಕೆ ನಿಮ್ಮ ಸ್ನೇಹಿತರು ಕುಳಿತಿರುತ್ತಾರೆ. ಆದ್ದರಿಂದ, ನೀವು ಬೇಕಾದಷ್ಟು ಕೆಲಸವನ್ನು ಮಾಡಿಸಿಕೊಂಡು ಬರಬಹುದೆಂದು ಹೇಳತ್ತಿದ್ದರು. ಆಗ ನಾನು ಅವರಿಗೆ ಏನು ಉತ್ತರ ಕೊಡುತ್ತಿದ್ದೇನೆಂದರೆ, ಆ ಸ್ಥಾನದಲ್ಲಿ ಕುಳಿತಿರುವಂಥ ಒಂದು ವ್ಯವಸ್ಥೆಯನ್ನು ಕೇವಲ ಒಂದು ಕ್ಷೇತ್ರಕ್ಕೆ ಮೀಸಲಾಗಿರತಕ್ಕಂಥ ವ್ಯವಸ್ಥೆ ಅಲ್ಲ. 224 ಜನ ಸದಸ್ಯರುಗಳು ಇಡೀ ಕರ್ನಾಟಕ ರಾಜ್ಯವನ್ನು ಪ್ರತಿಬಿಂಬಿಸುವಂಥ ಒಂದು ವ್ಯವಸ್ಥೆ ಆ ಸ್ಥಾನದ ಮಹಿಮೆ ನಮ್ಮ ವ್ಯಕ್ತಿಗತವಾಗಿರತಕ್ಕಂಥ ಸಮಸ್ಯೆಯನ್ನು ನಾವು ಅಲ್ಲಿಗೆ ತರಬಾರದು ಎಂಬ

ಉದ್ದೇವನ್ನು ಅಲ್ಲಿ ಹೇಳಿಕೊಂಡು ಹೋಗುತ್ತಿದ್ದೆವು. ಇವತ್ತು ನನಗೆ ಬಹಳ ಸಂತೋಷ ತರತಕ್ಕಂಥ ವಿಚಾರ ಏನೆಂದರೆ, ಮಾನ್ಯ ಯೋಗೀಶ್ ಭಟ್‌ರವರು ಈಗಾಗಲೇ ಹೇಳಿದ ಪ್ರಕಾರ ನಿಯಮಾವಳಿಯ ಪುಸ್ತಕವನ್ನು ಎಲ್ಲರಿಗೂ ಸಹ ಕೊಟ್ಟಿದ್ದಾರೆ. ಆ ಪುಸ್ತಕದ ವ್ಯವಸ್ಥೆ ಮೂಲಕ ನಾವು ಇಲ್ಲಿ ಚರ್ಚೆ ಮಾಡತಕ್ಕಂಥ ಸಂದರ್ಭ ಆಗಬೇಕೆಂದು ಬಹಳಷ್ಟು ಕೇಳಿದರು. ನಿಯಮಾವಳಿಯು ಕನ್ನಡ ಮತ್ತು ಇಂಗ್ಲೀಷ್ ಪುಸ್ತಕವನ್ನು ತೆಗೆದುಕೊಂಡು ಸುಮಾರು 20 ದಿವಸಗಳ ಕಾಲ ನಾನು ಓದಿದ್ದೇನೆ. ಆ ನಿಯಮಾವಳಿಗಳನ್ನು ಅಪ್ಲೈ ಮಾಡತಕ್ಕಂಥ ಯಾವುದೇ ಸಚಿದರ್ಭ ಬಂದರೂ ಕೂಡ ನಿಯಮಾಬಳಿ ವಿಚಾರದಲ್ಲಿ ಯಾರೂ ಕೂಡ ನಮಗೆ ಸಹಕರ ನೀಡತಕ್ಕಂಥ ದಿನವೇ ನನಗೆ ಗೊತ್ತಾಗಲಿಲ್ಲ. ಆದ್ದರಿಂದ, ಆ ನಿಯಮಾವಳಿ ಪುಸ್ತಕವನ್ನು ನಾವು ಒಳಗಡೆ ಇಟ್ಟುಕೊಂಡರೆ ಅದಕ್ಕೆ ಗೌರವ ಎಂದು ನನಗೆ ಅನಿಸುತ್ತದೆ. ನಿಯಮಾವಳಿ ಪ್ರಕಾರ ಪ್ರಶ್ನೋತ್ತರ ಮುಗಿಯಬೇಕೆಂದು ಇದ್ದರೂ ಕೂಡ ಎರಡು ಗಂಟೆವರೆಗೂ ಮಾಡಿರತಕ್ಕಂಥ ಸಂದರ್ಭಗಳು ಸಾಕಷ್ಟು ಇವೆ. ಯಾವುದೋ ಒಂದು ಕ್ಷೇತ್ರಕ್ಕೆ ಅಥವಾ ಒಂದು ಜಿಲ್ಲೆಗೆ ಸಂಬಂಧಪಟ್ಟಂತೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡತಕ್ಕಂಥ ಸಂದರ್ಭಗಳು ಸಾಕಷ್ಟು ಇವೆ. ತಾವು ನೂತನವಾಗಿ ಈ ಸ್ಥಾನಕ್ಕೆ ಬಂದಿದ್ದೀರಿ. ಇದೇ ರೀತಿಯಾಗಿ ತಾವು ನಗುತ್ತಾ ಇರಿ. ಕೋಪ ತರಿಸುವಂಥ ಪ್ರಯತ್ನಗಳು ಇಲ್ಲಿ ಬಹಳಷ್ಟು ನಡೆಯುತ್ತಲೇ ಇರುತ್ತವೆ. ಆದ್ದರಿಂದ, ಕೋಪ ಬಂದಂತ ಸಂದರ್ಭದಲ್ಲಿ ಮಾನ್ಯ ಯೋಗೀಶ್ ಭಟ್‌ರವರು ಇಲ್ಲಿಯೇ ಇರುತ್ತಾರೆ. ಅವರಿಗೂ ಕೂಡ ನಿಮ್ಮಷ್ಟೆ ತಾಳ್ಮೆ ಇದೆ. ಪ್ಯಾನಲ್‌ನಲ್ಲಿ ಅವರನ್ನು ಕರೆಸಿ ಕುಳ್ಳರಿಸಿದರೆ ಅವರೂ ಕೂಡ ಮ್ಯಾನೇಜ್ ಮಾಡತಕ್ಕಂಥ ಸಂದರ್ಭ ಇರುತ್ತದೆ. ಏಕೆಂದರೆ, ಇದೇನು ಹೆದರಿಕೊಳ್ಳುವಂಥ ವ್ಯವಸ್ಥೆಯೇನು ಅಲ್ಲ. ಆ ಕೋಪವನ್ನು ಶಮನಮಾಡಿಕೊಳ್ಳಲಿಕ್ಕೆ ಒಂದು-ಎರಡು ನಿಮಿಷ ಹೊರಗಡೆ ಹೋದರೆ ಆ ಸಂದರ್ಭದಲ್ಲಿ ನಮ್ಮ ಸಮಸ್ಯೆ ಕೂಡ ಅದರ ಜೊತೆಗೆ ಬಗೆಹರಿಯುತ್ತದೆ ಎಂಬ ದೃಷ್ಟಿಯಿಂದ ನಾವು ಪ್ಯಾನಲ್‌ನಲ್ಲಿರತಕ್ಕಂಥವರನ್ನು ಕರೆಯತಕ್ಕಂಥ ಸಂದರ್ಭಗಳಾಗಿರುತ್ತವೆ. ಆದ್ಧರಿಂದ ಮಾನ್ಯ ಬೋಪಯ್ಯನವರು, ನಾವು ನಿಮ್ಮನ್ನು ಹೆಸರಿಟ್ಟು ಕೂಗಬಾರದು. ಬಹಳ ಜನ ಇವತ್ತು ಮಾತನಾಡುವಾಗ ನನ್ನ ಸ್ನೇಹಿತರೆಂದು ಹೇಳಿದರು. ತಾವು ಈ ಭಾಗದಲ್ಲಿದ್ದಾಗ ಮಾತ್ರ ಸ್ನೇಹಿತರಾಗಿರುತ್ತೀರಿ. ಆ ಜಾಗಕ್ಕೆ ನೀವು ಬಂದರೆ, ನಮಗೆಲ್ಲಾ ನೀವು ಉಪಾಧ್ಯಕ್ಷರಾಗಿರುತ್ತೀರಿ. ಉಪಾಧ್ಯಕ್ಷರೆಂದು ಕರೆಯುವ ವ್ಯವಸ್ಥೆ ಇಲ್ಲ. ಏಕೆಂದರೆ, ಅದು ಅಧ್ಯಕ್ಷರ ಸ್ಥಾನವಾಗಿರುವುದರಿಂದ ನಿಮ್ಮನ್ನು ಅಧ್ಯಕ್ಷರೆಂದು ನಾವು ಇಲ್ಲಿ ಸಂಭೋದನೆ ಮಾಡಬೇಕಾಗುತ್ತದೆ. ಈ ಒಂದು ವ್ಯವಸ್ಥೆಯ ಹಿನ್ನಲೆಯಲ್ಲಿ

ಯಾವಾಗ ಮಾನ್ಯ ಬೋಪಯ್ಯನವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುತ್ತಾರೆಂದು ನಿನ್ನೆದಿವಸ ಪತ್ರಿಕೆಯಲ್ಲಿ ನೋಡಿದ ಸಂದರ್ಭದಲ್ಲಿ ಸ್ನೇಹಿತರಾದ ಮಾನ್ಯ ಜೀವರಾಜ್‌ರವರು ನನ್ನ ಹತ್ತಿರ ಬಂದು ನೀವೇನಾದರೂ ಕಾಂಗ್ರೆಸ್ ಕಡೆಯಿಂದ ನಾಮಿನೇಷನ್ ಮಾಡುತ್ತೀರಾ ಎಂದು ಕೇಳಿದರು. ನಾನು ಏನು ಹೇಳಿದ್ದೇನೆಂದರೆ, ಮಾನ್ಯ ಯಡಿಯೂರಪ್ಪನವರು ಈಗ ಮುಖ್ಯಮಂತ್ರಿಯಾಗಿದ್ದಾರೆ. ಮತ್ತೇ ನನ್ನ ಸ್ನೇಹಿತರಾಗಿರುವ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೂ ಕೂಡ ಇಲ್ಲಿಯೇ ಇದ್ದಾರೆ. ನನ್ನನ್ನು ಆ ಭಾಗದಿಂದ ಅಲ್ಲಿ ಕೂರಿಸಿ ಉಪಾಧ್ಯಕ್ಷರನ್ನಾಗಿ ಮಾಡಬೇಕಾದರೆ, ನಮ್ಮ ಕಡೆಯ ಜನರು ಇಲ್ಲಿ ಬಂದು ಕೇಳಿದಂಥ ಸಂದರ್ಭದಲ್ಲಿ ಗೋಪಾಲ ಕೃಷ್ಣರವರನ್ನು ಮಾಡಿದರೆ ನಮ್ಮದೇನು ಅಭ್ಯಂತರವಿಲ್ಲ ಮತ್ತೇ ಯಾವುದೇ ವ್ಯವಸ್ಥೆಗೆ ನಾವು ಅಡ್ಡ ಬರುವುದಿಲ್ಲ. ದಯವಿಟ್ಟು ಮಾಡಿ ಎಂದು ಹೇಳಿರತಕ್ಕಂಥ ಒಂದು ಸಂದರ್ಭ ಅವತ್ತು ಆಗಿತ್ತು. ಆದ್ದರಿಂದ, ನಾನು ಅವರನ್ನು ಸ್ಮರಿಸುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ಬೋಪಯ್ಯನವರು ಆ ಭಾಗದಿಂದ ಆಗುತ್ತಾರೆಂದು ಮಾನ್ಯ ಜೀವರಾಜ್ ರವರು ಹೇಳಿದಾಗ ಈಗಾಗಲೇ 12.30 ಗಂಟೆಯಾಗಿದೆ. ಮತ್ತೇ ಮಾನ್ಯ ಬೋಪಯ್ಯನವರು ಈಗಾಗಲೇ ನಾಮಿನೇಷನ್ ಅನ್ನು ಹಾಕಿದ್ದಾರೆ. ಅವರು ಬಹಳ ಒಳ್ಳೆಯ ವ್ಯಕ್ತಿ. ದೇವರು ಎರಡು ಕಣ್ಣನ್ನು ಏತಕ್ಕೆ ಇಟ್ಟಿದ್ದಾರೆಂದರೆ, ಕೆಲವು ಸಂದರ್ಭದಲ್ಲಿ ಬಲ ಭಾಗಕ್ಕೆ ಒಂದು ಸಾರಿ ಮತ್ತು ಎಡ ಭಾಗಕ್ಕೆ ಒಂದು ಸಾರಿ ನೋಡಬೇಕಾಗುತ್ತದೆ. ಈ ರೀತಿ ದೂರದೃಷ್ಟಿ ಇಟ್ಟುಕೊಂಡಿರತಕ್ಕಂಥ ಮಹಾ ವ್ಯಕ್ತಿ ಮಾನ್ಯ ಬೋಪಯ್ಯನವರು ಎಂದು ಹೇಳಿದರೆ ತಪ್ಪಾಗಲಾರದು. ಶಾಂತಿ, ಶಿಸ್ತು, ಸಮಾಧಾನ, ಮತ್ತು ತಾಳ್ಮೆಗೂ ಕೂಡ ಹೆಸರಾಗಿರತಕ್ಕಂಥ ಬೋಪಯ್ಯನವರನ್ನು ಈ ಒಂದು ಸ್ಥಾನಕ್ಕೆ ತಂದಿರತಕ್ಕಂಥದ್ದೇ ಸಂತೋಷ, ಬೇರೇನು ಇಲ್ಲ ಎಂದು ನಾವು ನಿನ್ನೆ ದಿವಸ ಮಾತನಾಡಿಕೊಂಡಿದ್ದೆವು. ಅದರಂತೆ ತಮ್ಮನ್ನು ಆಯ್ಕೆಮಾಡಿ ಆ ಸ್ಥಾನದಲ್ಲಿ ಕುಳ್ಳಿರಿಸಿದ್ದಾರೆ. ಮುಂದೆ ಬರತಕ್ಕಂಥ ದಿನಗಳಲ್ಲಿ ಸರ್ಕಾರದ ವತಿಯಿಂದ ಚರ್ಚೆಗೆ ಅವಕಾಶ ಕೊಡತಕ್ಕಂಥದ್ದು ಎರಡು ಗಂಟೆ ಇದ್ದರೆ ನೀವು ನಮ್ಮ ಕಡೆ ಮೂರು ಗಂಟೆ ಕಾಲಾವಕಾಶವನ್ನು ಮಾತನಾಡಲಿಕ್ಕೆ ಕೊಡಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದಿಂದ ನೂತನವಾಗಿ ಆರಿಸಿ ಬಂದಂಥ ಅನೇಕ ಶಾಸಕರುಗಳು ಇದ್ದಾರೆ. ನಾನು ನಿಮ್ಮಲ್ಲಿ ಕೊನೆಯದಾಗಿ ಬೇಡಿಕೊಳ್ಳುವುದು ಇಷ್ಟೇ. ಮುಂದಿನ ಸಾಲಿನಲ್ಲಿರತಕ್ಕಂಥವರೆಗೆ ಮತ್ತು ಹತ್ತಿರದಲ್ಲಿರತಕ್ಕಂಥ ಜನರಿಗೆ ನಾವು ಹೆಚ್ಚಿನ ಒಂದು ಅವಕಾಶವನ್ನು ಕಡಿಮೆ ಮಾಡಿಕೊಂಡು ಹಿಂದುಗಡೆ ಬೆಂಚಿನಲ್ಲಿರುವ ಹೊಸ ಶಾಸಕರಾಗಿ ಆಯ್ಕೆಯಾಗಿ ಬಂದಿರತಕ್ಕಂಥವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟರೆ ಖಂಡಿತವಾಗಿ ಅಲ್ಲಿ

ಕುಳಿತಿರತಕ್ಕಂಥ ಒಂದು ಸ್ಥಾನಕ್ಕೆ ಒಂದು ನ್ಯಾಯವನ್ನು ಕೊಟ್ಟಂತೆ ಆಗುತ್ತದೆ ಎನ್ನುವ ಒಂದು ದೃಷ್ಟಿಯಿಂದ ತಮ್ಮ ಮುಂದೆ ನಾನು ಈ ವಿಷಯ ಇಡುತ್ತಿದ್ದೇನೆ. ಏಕೆಂದರೆ ನಾನು ಆ ಸ್ಥಾನದಲ್ಲಿ ಮೂರು ವರ್ಷಗಳ ಕಾಲ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸಿರುವುದರಿಂದ ನಾನು ಮಾತನಾಡುವುದು ನನ್ನ ಒಂದು ಆದ್ಯ ಕರ್ತವ್ಯ ಕೂಡ. ಆ ಒಂದು ದೃಷ್ಟಿಯಿಂದ ನಾನು ನಿಮ್ಮ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನ ಪಟ್ಟಿರುತ್ತೇನೆ. ಒಟ್ಟಿನಲ್ಲಿ ನೀವು ಆ ಸ್ಥಾನಕ್ಕೆ ಬಂದು ಇವತ್ತು ಉಪಾಧ್ಯಕ್ಷರಾಗಿ ಕುಳಿತಿರುವಂಥ ಈ ಸನ್ನಿವೇಶದಲ್ಲಿ ನಾನು ನಿಜವಾಗಲೂ ಮನಸಂತೋಷದಿಂದ ನಿಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರಗಳು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ರಾಮನಗರ): ಮಾನ್ಯ ಉಪಾಧ್ಯಕ್ಷರೆ, ಈ ದಿನ ತಾವು ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿರತಕ್ಕಂಥ ಈ ಸಂದರ್ಭದಲ್ಲಿ ಮೊದಲನೆಯದಾಗಿ ನಾನು ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಗೋಪಾಲಕೃಷ್ಣರವರು ಕಳೆದ ಸರ್ಕಾರದಲ್ಲಿ 40 ತಿಂಗಳು ಕೆಲಸವನ್ನು ನಿರ್ವಹಿಸಬೇಕಾದ ಸನ್ನಿವೇಶದಲ್ಲಿ ಆದಂಥ ಅನುಭವಗಳ ಬಗ್ಗೆ ತಮ್ಮ ಮುಂದೆ ಆ ಒಂದು ಸ್ಥಾನದ ಕಿರಿಕಿರಿಗಳು ಆ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡಬೇಕಾದರೆ ಯಾವ ಒಂದು ಸೂಕ್ಷ್ಮವಾದ ವಿಚಾರಗಳು ಮತ್ತು ಸಂದರ್ಭಗಳು ಇರಬಹುದು, ಸದನದಲ್ಲಿ ಸದಸ್ಯರುಗಳಲ್ಲಿ ಬರತಕ್ಕಂಥ ಪರಸ್ಪರ ವಾಗ್ದಾಳಿಯ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ನಿರ್ಧಾರಗಳಲ್ಲಿ, ಯಾವ ಒಂದು ಕಠಿಣವಾದ ಶ್ರಮವನ್ನು ಆ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮನ್ನು ಹತ್ತಿರದಿಂದ ಗಮನಿಸಿದ್ದಂಥದ್ದು, ಕಳೆದ ಸರ್ಕಾರದಲ್ಲಿ ನಾವು ನೀವು ಜೊತೆಯಾಗಿ ಕೆಲಸವನ್ನು ಮಾಡಿದ್ದೇವೆ. ತಾವು ಕೊಡಗು ಭಾಗದಿಂದ ಆಯ್ಕೆಯಾಗಿ ಬಂದಿದ್ದೀರಿ, ಆ ಭಾಗದ ಪ್ರತಿನಿಧಿಗಳಾಗಿ ಆ ಭಾಗದಲ್ಲಿ ಜನಿಸಿರತಕ್ಕಂಥ ಕೊಡಗು ಜಿಲ್ಲೆಯ ಜನರ ಒಂದು ಭಾವನೆಗಳನ್ನು ನಾವು ನೋಡುವುದಾದರೆ ಹೊರನೋಟಕ್ಕೆ ಒಂದು ರೀತಿಯ ಗಡಸಾಗಿ ಕಾಣತಕ್ಕಂಥದ್ದು ಕೊಡಗು ಜಿಲ್ಲೆಯಲ್ಲಿರತಕ್ಕಂಥ ನಾಗರೀಕರನ್ನು ಗಮನಿಸಿದಂಥ ಸಂದರ್ಭದಲ್ಲಿ, ವಿಶೇಷವಾಗಿ ನಾವು ಅವರಲ್ಲಿ ಕಾಣುತ್ತೇವೆ. ಆದರೆ ನನಗೆ ತಾವು ಬಹಳ ಸರಳ ಮತ್ತು ಮೃದು ಸ್ವಭಾವದ ಒಬ್ಬ ವ್ಯಕ್ತಿಯಾಗಿ ಕಾಣತ್ತೀರಿ. ಆದರೆ ಮನಸ್ಸಿನಲ್ಲಿ ತಾವು ಆ ಕೊಡಗಿನಲ್ಲಿರತಕ್ಕಂಥ ಆ ಗಡಸು ತೀರ್ಮಾನಗಳನ್ನು ತೆಗೆದುಕೊಳ್ಳತಕ್ಕಂಥ ಆ ಗಡಸು ಭಾವನೆಗಳನ್ನು ವ್ಯಕ್ತಪಡಿಸತಕ್ಕಂಥದ್ದು ನಿಮ್ಮ ಮನಸ್ಸಿನಲ್ಲಿ ಅದನ್ನು ಒಂದು ದೃಢವಾಗಿ ಇಟ್ಟುಕೊಂಡಿದ್ದೀರಿ ಎನ್ನತಕ್ಕಂಥದ್ದು ನಾನು ನಿಮ್ಮಲ್ಲಿ ಕಂಡಿರತಕ್ಕಂಥ ವಿಶೇಷವಾದಂಥ ಒಂದು ಗುಣ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ

ಹೇಳುತ್ತೇನೆ. ನಾನು ಹೆಚ್ಚಿಗೆ ವಿಷಯಗಳನ್ನು ಪ್ರಸ್ತಾಪ ಮಾಡಿ ಮುಖಸ್ಥತಿಗೆ ತಮ್ಮನ್ನು ಹೊಗಳತಕ್ಕಖಿಂಥದ್ದು ಅನವಶ್ಯಕ. ನನಗೆ ಒಂದು ನಂಬಿಕೆ ಇದೆ. ಆ ಸ್ಥಾನದಲ್ಲಿ ಕುಳಿತು ತಾವು ಕೆಲಸವನ್ನು ನಿರ್ವಹಿಸಬೇಕಾದರೆ ಈ ಸದನದ ಒಂದು ಗೌರವವನ್ನು ಎತ್ತಿಹಿಡಿಯತಕ್ಕಂಥದ್ದು ಈ ಸದನದ ಭಾಗದ ಸದಸ್ಯರ ಭಾವನೆಗಳಿಗೆ ಇವತ್ತು ಸಂಪೂರ್ಣವಾಗಿ ತಾವು ಸಹಕಾರವನ್ನು ಕೊಡತಕ್ಕಂಥ ನ್ಯಾಯಯುತವಾಗಿ ಕೆಲಸವನ್ನು ಮಾಡುತ್ತೀರಿ ಎನ್ನತಕ್ಕಂಥ ಒಂದು ಆತ್ಮವಿಶ್ವಾಸವನ್ನು ಮತ್ತು ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಮತ್ತೊಮ್ಮೆ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ(ಬಸವಕಲ್ಯಾಣ): ಮಾನ್ಯ ಉಪಾಧ್ಯಕ್ಷರೆ, ತಾವು ಉಪಾಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿರುವಂಥ ಸಂದರ್ಭಗಳಲ್ಲಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ಅದೇ ಪ್ರಕಾರವಾಗಿ ವಿರೋಧ ಪಕ್ಷದ ಎಲ್ಲಾ ಶಾಸಕರು ಮತ್ತು ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು ಜೆ.ಡಿ(ಎಸ್) ಶಾಸಕರು ಎಲ್ಲರೂ ಒಗ್ಗಟ್ಟಾಗಿ ಎಲ್ಲಾ ಶಾಸಕರು ತಮಗೆ ಅವಿರೋಧವಾಗಿ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ ಇದೊಂದು ಮಹತ್ವಪೂರ್ಣವಾದ ನಿರ್ಣಯವೆಂದು ನಾನು ಹೇಳಬಯಸುತ್ತೇನೆ. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳು ನಮ್ಮ ಸಂವಿಧಾನಕ್ಕೆ ಬದ್ಧವಾಗಿ ಬಹಳ ದೊಡ್ಡ ಸ್ಥಾನಗಳು. ತಾವು ಅದರಲ್ಲಿಯೂ ಕೊಡಗು ಜಿಲ್ಲೆಯಿಂದ ಬಂದವರು. ಕೊಡಗು ಎಂದರೆ ಕರ್ನಾಟಕದ ಒಂದು ಹೆಮ್ಮೆಯ ಜಿಲ್ಲೆ ಎಂದು ನಾನು ಅಭಿಮಾನದಿಂದ ಹೇಳುತ್ತೇನೆ. ಏಕೆಂದರೆ ನಮ್ಮ ರಾಷ್ಟ್ರಕ್ಕೆ ಎಲ್ಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇವತ್ತು ಮಿಲ್ಟ್ರಿಯಲ್ಲಿ ಎಲ್ಲಾ ಜಿಲ್ಲೆಗಿಂತಲೂ ಹೆಚ್ಚಿಗೆ ಯಾರಾದರು ಇದ್ದಾರೆಂದರೆ ಅವರು ಆ ಕೊಡಗು ಜಿಲ್ಲೆಯವರು ಎನ್ನುವ ಭಾವನೆ ನಮ್ಮಲ್ಲಿದೆ. ಇದೊಂದು ಕರ್ನಾಟಕಕ್ಕೆ ಒಂದು ಹೆಮ್ಮೆಯ ಮಾತು. ದೊಡ್ಡ ದೊಡ್ಡ ಉನ್ನತ ಸ್ಥಾನಗಳಿಗೆ ಹೋದಂಥ ನಿಮ್ಮ ಕೊಡಗಿನ ಜಿಲ್ಲೆಯವರು, ತಾವು ಕೂಡ ಇವತ್ತು ಒಂದು ದೊಡ್ಡ ಸ್ಥಾನಕ್ಕೆ ಹೋಗಿದ್ದೀರಿ. ತಾವು B.Sc.,LLB ಪದವೀಧರರು. ಈಗಾಗಲೇ ನಮ್ಮ ಎಲ್ಲಾ ಶಾಸಕ ಮಿತ್ರರು ತಮ್ಮ ಬಗ್ಗೆ ಎಲ್ಲವನ್ನು ಮಾತನಾಡಿದ್ದಾರೆ. ಅದರ ಪ್ರಕಾರವಾಗಿ ನಮ್ಮ ವಿಧಾನಸಭೆಯ ಶಾಸಕರ ಭಾವನೆಗಳು ಏನಿವೆ ಅವೆಲ್ಲಾ ಸರಿಯಾಗಿ ಆಗಬೇಕು. ಅಲ್ಲಿ ಎಲ್ಲಾ ತರಹದ ಅನುಕೂಲತೆಗಳು ಸಿಗಬೇಕು. ನಾವು ಬೇರೆ ಬೇರೆ ರಾಜ್ಯಗಳಾದ ಮಹಾರಾಷ್ಟ್ರ ಆಗಲಿ, ಗುಜರಾತ್ ಆಗಲಿ, ವೆಸ್ಟ್ ಬೆಂಗಾಲ್‌ಗೆ ಹೋದಾಗ ಅಲ್ಲಿ ಇದ್ದಂಥ ಅನುಕೂಲತೆಗಳು ನಮ್ಮ ಶಾಸಕರಿಗೆ ಸಿಗುತ್ತಿಲ್ಲ. ಅದರ ಪ್ರಕಾರವಾಗಿ ತಮ್ಮ ಘನ ಅಧ್ಯಕ್ಷತೆಯಲ್ಲಿ ನಮ್ಮ ಶಾಸನಸಭೆಯ ಹೊಸ recruitment ಇರಬಹುದು

ಅಥವಾ ಬೇರೆ ರೀತಿಯ facilities ಗಳು ಇರಬಹುದು, ಮೂಲಭೂತ ಸೌಲಭ್ಯಗಳು ಇರಬಹುದು ಸರಿಯಾದ ರೀತಿಯ ಒಂದು ಕಾರ್ಯವೈಖರಿಯನ್ನು ತಾವು ಮಾಡುತ್ತೀರಿ ಎನ್ನುವ ಒಂದು ಭರವಸೆಯನ್ನು ತಮ್ಮಲ್ಲಿ ಇಟ್ಟುಕೊಂಡು ತಮ್ಮ ಬಗ್ಗೆ ಎಲ್ಲರಿಗಿಂತ ವಿಶೇಷವಾಗಿ ನಮ್ಮ ಎಲ್ಲ ಮಿತ್ರರುಗಳು ತಮ್ಮ ಬಗ್ಗೆ ಮಾತನಾಡಿದ್ದಾರೆ. ತಾವು ಒಳ್ಳೆಯ ರೀತಿಯಲ್ಲಿ ಕಾರ್ಯವನ್ನು ನಡೆಸಿಕೊಂಡು ಹೋಗಿ ನಮ್ಮ ಈ ಒಂದು ವಿಧಾನಸಭೆಯ ಘನತೆ ಗೌರವವನ್ನು ಕಾಪಾಡಿಕೊಂಡು ಹೋಗುತ್ತೀರಿ ಎಂದು ಹೇಳಿ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ತಾವು ಅವಿರೋಧವಾಗಿ ಆಯ್ಕೆಯಾಗಿರುವ ಈ ಸಂದರ್ಭಗಳಲ್ಲಿ ತಮಗೆ ಅಭಿನಂದನೆಗಳನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮಲ್ಲಿಕಾ ಪ್ರಸಾದ್(ಪುತ್ತೂರು): ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ವಿಶೇಷ ಸಂದರ್ಭದಲ್ಲಿ ತಾವು ಈ ಒಂದು ದೊಡ್ಡ ಗೌರವಾನ್ವಿತ ಮತ್ತು ಪ್ರತಿಷ್ಠಿತವಾದ ಹುದ್ದೆಯನ್ನು ಅಲಂಕರಿಸಿದ್ದೀರಿ. ಖಂಡಿತವಾಗಿ ನೀವು ಮುಂದಿನ ದಿನಗಳಲ್ಲಿ ಇದನ್ನು ಉತ್ತಮವಾದ ರೀತಿಯಲ್ಲಿ ಸುಧಾರಿಸಿಕೊಂಡು ಹೋಗುತ್ತೀರಿ ಎನ್ನುವ ಒಂದು ಧೈರ್ಯ ಮತ್ತು ವಿಶ್ವಾಸ ನನಗೆ ಇದೆ. ಹಾಗೆಯೇ ನೀವು ಕೊಡಗಿನವರು ವೀರರು ಮತ್ತು ಶೂರರು ಆಗಿದ್ದೀರಿ. ವೀರ ಮತ್ತು ಶೂರತ್ವವನ್ನು ನಮ್ಮ ಸದಸ್ಯರ ಮೇಲೆ ಉತ್ತಮವಾಗಿ ಪ್ರಯೋಗಿಸಿಕೊಂಡು ಉತ್ತಮವಾಗಿ ಸದಸ್ಯರನ್ನು ಸಮಜಾಯಿಸಿಕೊಂಡು ಹೋಗುವ ರೀತಿಯಲ್ಲಿ ಉತ್ತಮವಾದ ಕೆಲಸವನ್ನು ಮಾಡುತ್ತೀರಿ. ಅದೇ ತರಹ ಇನ್ನೊಂದು ಜನರ ಸಮಸ್ಯೆ ಏನೇ ಬಂದರೂ ಸಹ ಜನರ ವಿಶ್ವಾಸವನ್ನುಗಳಿಸುವಲ್ಲಿ ನೀವು ಉತ್ತಮವಾದ ಕೆಲಸವನ್ನು ಮಾಡಿ, ಉತ್ತಮವಾದ ರೀತಿಯಲ್ಲಿ ಇರುತ್ತೀರಿ ಎನ್ನುವ ಒಂದು ವಿಶ್ವಾಸವನ್ನು ನಾನು ಇಡುತ್ತಾ, ಇವತ್ತಿನ ವಿಶೇಷವಾದ ಈ ಸಂದರ್ಭದಲ್ಲಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಇವತ್ತು ತಾವು ಸರ್ವಾನುಮತದಿಂದ ಈ ಸದನದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕಾಗಿ ನನಗೆ ಬಹಳ ಸಂತೋಷವಾಗಿದೆ. ಹಾಗಾಗಿ ತಮ್ಮಲ್ಲಿ ನಾನು ಒಂದನ್ನು ಕೇಳಿಕೊಳ್ಳುತ್ತೇನೆ. ಈ ಸಾರಿ ನಾವು 90 ಜನ ಶಾಸಕರು ಹೊಸದಾಗಿ ಆಯ್ಕೆಯಾಗಿ ಬಂದಿದ್ದೇವೆ. ಈ ಹೊಸದಾಗಿ ಆಯ್ಕೆಯಾಗಿ ಬಂದಂಥ ಶಾಸಕರಿಗೆ ಮಾತನಾಡಲು ಹೆಚ್ಚಿಗೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ.ನರೇಂದ್ರಬಾಬು(ಮಹಾಲಕ್ಷ್ಮಿ ಲೇಔಟ್): ಮಾನ್ಯ ಉಪಾಧ್ಯಕ್ಷರೆ, ನೂತನವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿರತಕ್ಕಂಥ ತಮಗೆ ಅಭಿನಂದನೆಗಳನ್ನು ಹೇಳುವುದಕ್ಕೆ ನಿಜವಾಗಲೂ ಸಂತೋಷವಾಗುತ್ತದೆ. ಏಕೆಂದರೆ ಹಲವಾರು ಭಾರಿ ಕಳೆದ ಸಲ ತಾವು ಮಾತನಾಡುವಾಗಲೂ ಸಹ ನಾನು ಗಮನಿಸಿದ್ದೇನೆ. ತಾವು ಮಾತನಾಡುವ ಶೈಲಿ ಮತ್ತು ತೀವ್ರತೆಯ ಆ ಹರಿತವಾದ ಮಾತುಗಳನ್ನು ಕೇಳಿದ್ದೇವೆ. ಒಂದನ್ನು ನಾವು ಈ ಸಂದರ್ಭದಲ್ಲಿ ವಿನಂತಿ ಮಾಡುಕೊಳ್ಳುವುದೇನೆಂದರೆ, ಎಲ್ಲರೂ ಹೇಳಿದ ಹಾಗೆ ಆ ಸ್ಥಾನ 224 ಶಾಸಕರ ನಾಡಿ ಮಿಡಿತವನ್ನು ಪ್ರತಿನಿಧಿಸಲ್ಲಿಕ್ಕೆ ಇರತಕ್ಕಂಥ ಒಂದು ಕೇಂದ್ರ. ನೀವು ಆಡಳಿತ ಮತ್ತು ಪ್ರತಿಪಕ್ಷದ ಎಲ್ಲರಗೂ ಸಹ ನಿಸ್ಪಕ್ಷಪಾತವಾಗಿ ಸಹಕಾರವನ್ನು ಕಲ್ಪಿಸಿ ಕೊಡತಕ್ಕಂಥ ಒಂದು ಅವಕಾಶ ತಮಗೆ ಇದೆ. ಈ ಒಂದು ಸದನವನ್ನು ಬಹಶಃ ಆಗಲೇ ಮಾತನಾಡಿದಂತೆ ವೀರರ ಭೂಮಿಯಿಂದ ಬಂದಂಥ ನೀವು ಆ ಪರಂಪರೆಗೆ ಸೇರಿರತಕ್ಕಂಥವರು, ನೀವು ಇಡೀ ಕರ್ನಾಟಕದ ಪರಂಪರೆಯನ್ನು ಕಾಪಾಡತಕ್ಕಂಥ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಬೇರೆ ಬೇರೆ ಅವಕಾಶಗಳ ಬಗ್ಗೆ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂಥ ಸನ್ಮಾನ್ಯ ಗೋಪಾಲಕೃಷ್ಣರವರು ಬಹಳ ಕಠಿಣ ಎಂದು ಹೇಳುತ್ತಿದ್ದರು. ಒಂದು ಹೇಳುತ್ತೇನೆ, ಕರ್ನಾಟಕದ ನಾಡಿ ಮಿಡಿತವನ್ನು ಪ್ರತಿನಿಧಿಸತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ರಿಲ್ಯಾಕ್ಸ್ ಆಗಬೇಕಾಗುತ್ತದೆ, ಅವಕಾಶಗಳನ್ನು ಕೊಡಬೇಕಾಗುತ್ತದೆ. ಒಟ್ಟಿನಲ್ಲಿ ತಾವು ವಿಶಾಲವಾದ ಮನೋಭಾವವನೆಯಿಂದ ನಡೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ನಮಗೆ ಸಂಪೂರ್ಣ ಭರವಸೆ ಇದೆ. ನಿಮಗೆ ಶುಭವಾಗಲಿ, ಕರ್ನಾಟಕದ ಜನತೆಗೂ ನಿಮ್ಮ ಸ್ಥಾನದಿಂದ ಹೆಚ್ಚಿನ ಅವಕಾಶಗಳು ಮತ್ತು ಒಳ್ಳೆಯ ಅಭಿವೃದ್ಧಿಯ ದಿಕ್ಕನ್ನು ಕಾಣಲಿ ಎಂದು ಆಶಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈ ಸದನದ ಸಭಾನಾಯಕರು ಕನಾಟಕದ ರಾಜ್ಯದ ಮುಖ್ಯಮಂತ್ರಿಗಳು ಹಿರಿಯರಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರೇ, ಈ ಸದನದ ವಿರೋಧ ಪಕ್ಷದ ನಾಯಕರು ಹಿರಿಯರು ಆದ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಜೆ.ಡಿ(ಎಸ್) ಶಾಸಕಾಂಗ ಪಕ್ಷದ ನಾಯಕರು ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರೆ, ಸಚಿವ ಸಂಪುಟದ ಎಲ್ಲಾ ಹಿರಿಯ ಸದಸ್ಯರುಗಳೆ, ಹಾಗೆಯೆಏ ಎಲ್ಲಾ ಈ ಸದಸನ ಗೌರವಾನ್ವಿತ ಹಿರಿಯ ಮತ್ತು ಕಿರಿಯ ಸದಸ್ಯರುಗಳೆ, ಮೊದಲನೆಯದಾಗಿ ಈ ಒಂದು ಸದನದ ಉಪಾಧ್ಯಕ್ಷನಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದಂಥ ಎಲ್ಲಾ ಗೌರವಾನ್ವಿತ

ಸದಸ್ಯರುಗಳಿಗೆ ನನ್ನ ಹೃದಯ ತುಂಬಿದ ಗೌರವಗಳೊಂದಿಗೆ ನಮಸ್ಕಾರಗಳನ್ನು ಮಾಡುತ್ತಿದ್ದೇನೆ.

ಈಗ ತಾನೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನನ್ನ ಬಗ್ಗೆ, ಕೊಡಗು ಜಿಲ್ಲೆ ಹಾಗೂ ಜನತೆಯ ಬಗ್ಗೆ ವಿಶೇಷವಾದ ಗೌರವವನ್ನು ಇಟ್ಟು ಮಾತನಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ನನ್ನ ಬಗ್ಗೆ ವಿಶೇಷವಾದಂತಹ ಮಾತನ್ನು ಆಡಿದ್ದಾರೆ. ಅನೇಕ ಮಂತ್ರಿಗಳೂ ಕೂಡ ಸೇರಿ ಎಲ್ಲರೂ ಕೂಡ ಮಾತನಾಡಿದ್ದೀರಿ, ಕೊಡಗು ಜಿಲ್ಲೆ ಎಂದ ತಕ್ಷಣ ಈ ಜಿಲ್ಲೆಯಲ್ಲಿ ಯಾವುದೇ ಭೇದ ಮತ್ತೊಂದು ಇಲ್ಲವೆಂಬ ಮಾತನ್ನು ತಾವು ಹೇಳಿದ್ದೀರಿ. ಈ ಒಂದು ಉಪಾಧ್ಯಕ್ಷ ಸ್ಥಾನ ಮತ್ತು ಸಭೆಯ ಅಧ್ಯಕ್ಷ ಸ್ಥಾನ ಈಗ ತಾನೇ ಪ್ರಸ್ತಾಪ ಮಾಡಿದ ಹಾಗೆ ಇದು ಒಂದು ರೀತಿಯಲ್ಲಿ ಬಹಳ ಸೂಕ್ಷ್ಮವಾದಂತಹ ಸ್ಥಾನವಾಗಿದೆ. ಒಂದು ಕಡೆಯಿಂದ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎಂದು ಯಾವುದನ್ನು ನೋಡದೆ ಸಮಾನವಾಗಿ 224 ಸದಸ್ಯರ ಹಕ್ಕಯ ಹಾಗೂ ಗೌರವವನ್ನು ಕಾಪಾಡುವಂತಹ ಜವಾಬ್ದಾರಿ ಈ ಒಂದು ಸ್ಥಾನದಲ್ಲಿದೆ. ಕರ್ನಾಟಕ ವಿಧಾನಸಭೆ ತನ್ನದೆ ಆದಂತಹ ಘನತೆ, ಗೌರವ ಹಾಗೂ ಗಾಂಭೀರ್ಯವನ್ನು ಹೊಂದಿದೆ. ಈ ಹಿಂದೆ ಕೆಲಸ ಮಾಡಿದಂತಹ ಅನೇಕ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳು ಅದನ್ನು ಎತ್ತಹಿಡಿದುಕೊಂಡು ಬಂದಿದ್ದಾರೆ. ನಾನು ಅದನ್ನು ಗಮನಿಸಿದ್ದೇನೆ. ಈಗ ತಾನೇ ಹಿಂದೆ ಉಪಾಧ್ಯಕ್ಷರಾಗಿ ಕೆಲಸ ಮಾಡಿದಂತಹ ಸನ್ಮಾನ್ಯ ಶ್ರೀ ಎನ್.ವೈ.ಗೋಪಾಲಕೃಷ್ಣರವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಈ ಸ್ಥಾನದಲ್ಲಿ ಇಲ್ಲಿ ಕುಳಿತಾಗ ಬಹುಶಃ ಅಧ್ಯಕ್ಷರಾಗಿ 224 ಸದಸ್ಯರ ಗೌರವವನ್ನು ಎತ್ತಿಹಿಡಿಯುವಂತಹದ್ದು ಮೊದಲ ಕರ್ತವ್ಯ ಆಗುತ್ತದೆ. ಈ ಬಗ್ಗೆ ಅನೇಕ ಸದಸ್ಯರುಗಳು ಹೇಳಿದ್ದಾರೆ. ಹೊಸದಾಗಿ ಆಯ್ಕೆ ಆದಂತಹ ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಬಗ್ಗೆ ಸಾಕಷ್ಟು ಕಾಲಾವಕಾಶಗಳನ್ನು ಕೊಡಬೇಕು. ಹಿಂದುಗಡೆ ಬೆಂಚಿನವರಿಗೆ ಹೆಚ್ಚುಹೆಚ್ಚು ಅವಕಾಶ ಕೊಡಬೇಕೆಂಬ ವಿನಂತಿಯನ್ನು ಕೂಡ ಹಿರಿಯ ಸದಸ್ಯರು ಮತ್ತು ನನ್ನ ಅನೇಕ ಸ್ನೇಹಿತರುಗಳು ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಖಂಡಿತವಾಗಿ ನೂತನವಾಗಿ ಆಯ್ಕೆಯಾಗಿ ಬಂದಂತಹ ಸದಸ್ಯರಿಗೆ ಹೆಚ್ಚು ಅವಕಾಶಗಳನ್ನು ಕೊಡುವಂತಹದ್ದು, ಬಹುಶಃ ನನ್ನ ಕರ್ತವ್ಯವೆಂಬ ಭಾವನೆಯೊಂದಿಗೆ, ಅವಕಾಶಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕೊಡಬೇಕಾಗುತ್ತದೆ. ಅದರ ಜೊತೆಗೆ ನಾನು ಒಂದು ವಿನಂತಿಯನ್ನು ಸಹ ಮಾಡುತ್ತೇನೆ. ಮೊದಲನೇ ಬೆಂಚಿನಲ್ಲಿ ಕುಳಿತಂತಹ ಎಲ್ಲಾಹಿರಿಯ ಸದಸ್ಯರು ಒಂದಿಷ್ಟು ಅವಕಾಶಗಳನ್ನು ಅವರಿಗೂ ಕೊಡುವುದಕ್ಕೆ ತಾವು ಕೂಡ ಸಹಕಾರವನ್ನು ಕೊಟ್ಟರೆ ಖಂಡಿತವಾಗಿ ಹಿಂದಿನ ಬೆಂಚಿನವರಿಗೂ ಕೂಡ ಹಾಗೂ ನೂತನವಾಗಿ

ಆಯ್ಕೆಯಾದಂತಹ ಎಲ್ಲಾ ಸದಸ್ಯರುಗಳಿಗೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕಾದರೆ ಕೇವಲ ಇಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತವರಿಂದಲೇ ಸಾಧ್ಯವಿಲ್ಲ. ಎಲ್ಲಾ ಸದಸ್ಯರುಗಳು ಸಹಕಾರವನ್ನು ಕೊಟ್ಟಾಗ, ನಾವೇ ರೂಪಿಸಿಕೊಂಡಂತಹ ನಿಯಮಾವಳಿಗಳ ಪ್ರಕಾರ ನಾವೆಲ್ಲರೂ ನಡೆದುಕೊಂಡಾಗ ಖಂಡಿತ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ತಮ್ಮೆಲ್ಲರ ಸಹಕಾರ ಬಹಳ ಮುಖ್ಯವಾಗಿದೆ. ನಿಯಮಾವಳಿಯಂತೆ ನಾವು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಮತ್ತೊಮ್ಮೆ ನಿಮ್ಮೆಲ್ಲರ ಸಹಕಾರವನ್ನು ಕೋರಿ ಮುಂದಿನ ದಿನಗಳಲ್ಲಿ ತಾವು ಏನು ನನ್ನ ಮೇಲೆ ವಿಶ್ವಾಸವನ್ನಿಟ್ಟು ನಮ್ಮ ಜಿಲ್ಲೆಯ ಬಗ್ಗೆ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಬಹಳ ವಿನಯಪೂರ್ವಕವಾಗಿ ಗೌರವದ ಮಾತುಗಳನ್ನಾಡಿದ್ದೀರಿ. ಆ ವಿಶ್ವಾಸ ಮತ್ತು ನಮ್ಮ ಜಿಲ್ಲೆಯ ಬಗ್ಗೆ ಇಟ್ಟಂತಹ ಗೌರವ ಹಾಗೂ ನಂಬಿಕೆಗೆ ಯಾವುದೇ ರೀತಿಯಲ್ಲಿ ಚ್ಯುತಿಬಾರದ ಹಾಗೆ ನಿಷ್ಪಕ್ಷಪಾತವಾಗಿ ನಾನು ಕಾರ್ಯ ನಿರ್ವಹಿಸುತ್ತೇನೆಂಬ ಭರವಸೆಯನ್ನು ತಮ್ಮ ಮುಂದೆ ಕೊಡುತ್ತೇನೆ. ಮತ್ತೊಮ್ಮೆ ಈ ಒಂದು ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕೆ ನಿಮಗೆಲ್ಲರಿಗೂ ನಮಸ್ಕಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾವು ಕಾರ್ಯಕ್ರಮ ಪಟ್ಟಿಯಂತೆ ಮುಂದುವರೆಸೋಣ.

2.ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಚರ್ಚೆ

ವಿಷಯ:ಶಾಸಕ ಶ್ರೀ ರಘುಪತಿ ಭಟ್‌ರವರ ಪತ್ನಿಯಾದ
ಶ್ರೀಮತಿ ಪದ್ಮಪ್ರಿಯರವರ ಸಂಶಯಾಸ್ಪದ ಸಾವಿನ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ ಉಡುಪಿಯಲ್ಲಿ ಶ್ರೀಮತಿ ಪದ್ಮಪ್ರಿಯ ರವರ ಸಾವು ಸಂಶಯಾಸ್ಪದವಾಗಿದೆ. ಇದರ ತನಿಖೆಯೂ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಸರ್ಕಾರದ ಪರವಾಗಿ ಗೃಹಸಚಿವರು, ಪೋಲೀಸರು ಕೊಟ್ಟಿರುವಂತಹ ಹೇಳಿಕೆ ಒಂದಕ್ಕೊಂದು ತದ್ವಿರುದ್ದವಾಗಿದೆ. ಮತ್ತು ಈ ಪ್ರಕರಣ ಜನರ ಮನಸ್ಸಿನಲ್ಲಿ ತುಂಬಾ ಸಂಶಯವನ್ನು ಉಂಟುಮಾಡಿದೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸರ್ಕಾರ ಈ ವಿಷಯದಲ್ಲಿ ತೆರೆದ ಮನಸ್ಸಿನಿಂದ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ನಡೆಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ಬಗ್ಗೆ ಒಂದು ಸ್ಪಷ್ಟವಾದಂತಹ ಚಿತ್ರಣವನ್ನು ಜನತೆಯ ಮುಂದಿಡಬೇಕಾಗಿರುವುದರಿಂದ ಇದನ್ನು ಅತ್ಯಂತ ಆದ್ಯತೆಯ ಮೇಲೆ ಚರ್ಚಿಸುವ ಸಲುವಾಗಿ ಹಾಗೂ ಈ ವಿಷಯವನ್ನು